Karnataka Village Offices Abolition (Amendment) Bill, 1978, as passed by the L. A. and as Amended by the L. C. Consideration of Amendment.

Mr. Speaker.—I request Hon'ble Minister for Law and Social Welfare to move the Bill on behalf of Minister for Revenue.

Sri L. G. Havanur (Minister for Law and Social Welfare).— Sir, on behalf on Minister for Revenue, I move,

"that the following amendments made by the Legislative Council to the Karnataka Village Offices Abolition (Amendment Bill, 1978, as passed by the Legislative Assembly be taken into consideration."

The question was proposed

Mr. M. C. Basappa.— It is better if the concerned Minister explains the salient features of the Bill. Let us take up this Bill, after the Minister for Revenue comes over to this House.

Mr. Speaker.— Then, let us go to next bill. I request the Hon'ble Minister for Rural Development and Panchayat Raj to move the motion.

Karnataka Village Panchayat and Local Boards (Amendment), Bill 1978,

Motion to Consider

Sri K. Prabhakar (Minister for Rural Development and Panchayat Raj).—Sir, I move,

"that the Karnataka Village Panchayat and Local Boards (Amendment) Bill, 1978 be taken into consideration."

The question was proposed

Sir, this is a small bill just to replace the ordinance that has been issued in connection with the postponement of certain polls in connection with the Panchayat Elections in the State. and, according to the provisions of the Village Panchayat and Local Boards Act, this Government was not having powers to postpone the poll or interfare with the calendar of events issued by the Deputy Commissioners and in the circumstances the Government found it necessary to issue this ordinance. The Council was not in session and as the matter was urgent, we had resorted to issue the ordinance and it has been done in order to have powers to the Government to postpone polls in connection with certion elections of the Panchayat in the State. And

there was not enough time for members to exercise their franchise according to the calendar of events issued by the Deputy Commissionners and the people were also used to be busy in the month of June owing to heavy rains and also the villagers in the rural areas will be busy in agricultural operations like sowing etc., they represented before the Government to postpone elections for certain Panchayats in the State. So, in such circumstances Government had to resort to postpone the elections in the State and this Bill is to replace the ordinance which has been issued earlier and nothing more is implicted here. Accordingly, the Elections to the Village Panchayats in the State have been conducted in the State on 8-7-1978in 126 Panchayats and election for remaining 49 Panchayats will be conducted according to calander of events, on 19-11-1978. Thus, the elections of the Panchayats will become complete in the State. This Bill intends to replace the ordinance No, 6 in the form of a bill is now introduced before the House for consideration. I request the hon'ble members to give their full cooperation in passing this simple bill.

೫–೦೦ ಪಿ.ಎಂ.

† ಶ್ರೀ ಜೆ. ಎಚ್. ಪಟೇಲ್ (ಚನ್ನಗಿರಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಿದ್ದುಪಡಿ ತಂದಿರುವ ಈ ಸಂದರ್ಭದಲ್ಲಿ ಒಂದೆರಡು ಮಾತುಗಳಲ್ಲಿ ಹೇಳುವುದಾದರೆ, ಈ ತರಹ ತಿದ್ದುಪಡಿಗಳನ್ನು ತರುವುದು ಕಾನೂನಿನ ಅವಶ್ಯಕತೆ. ಆದರೆ ಈ ಪಂಚಾಯಿತಿ ಚುನಾವಣೆಗಳನ್ನು ಮುಂದಕ್ಕೆ ಹಾಕಿದ ಕ್ರಮ ಇದೆಯಲ್ಲ, ಆ ಕ್ರಮದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಜೂನ್ ತಿಂಗಳಲ್ಲಿ ದೊಡ್ಡ ಮಳೆ ಬರುತ್ತದೆ ಎನ್ನುವುದು ಇವರಿಗೆ ಕ್ಯಾಲೆಂಡರ್ ಆಫ್ ಇವೆಂಟ್ಸ್ ಪಬ್ಲಿಷ್ ಮಾಡಿದ ಮೇಲೆ ಗೊತ್ತಾಯಿತೆ ? ಈ ವರ್ಷ ಮಾತ್ರ ಜೂನ್ ತಿಂಗಳಲ್ಲಿ ಮಳೆ ಬರುವುದೆಂದು ಇವರಿಗೆ ಗೊತ್ತಾಯಿತೆ ? ಅವರು ಕೇವಲ ರಾಜಕೀಯ ಉದ್ದೇಶಕ್ಕೋಸ್ಕರ ಮುಂದೆ ಹಾಕಿದ್ದಾರೆಯೇ ಹೊರತು ಬೇರೆ ಇನ್ನು ಯಾವ ಕಾರಣದಿಂದಲೂ ಅಲ್ಲ. ಆದಕ್ಕೆ ಇನ್ನು ಬೇರೆ ಯಾವ ಕಾರಣವಿದೆ ? ಪಂಚಾಯಿತಿ ಚುನಾವಣೆಗಳನ್ನು ಮಾಡುತ್ತೇವೆಂದು ಅವಸರದಲ್ಲಿ ಘೋಷಣೆ ಮಾಡಿದರು, ಆದರೆ ಅವರಿಗೆ ಏನು ಅಪಾಯ ಕಾಣಿಸಿತೋ ಏನು ಸುಮ್ಮನೆ ಒಂದು ನೆಪಕ್ಕೆ ಮಳೆ ಬರುತ್ತದೆಂದು ಅನೇಕ ಮಾನ್ಯ ಎಂ.ಎಲ್.ಎ.ಗಳು ಕಾಗದ ಬರೆದಿದ್ದಾರೆ ಎನ್ನುವ ಒಂದು ಸಣ್ಣ ನೆಪಕ್ಕೆ ಮುಂದಕ್ಕೆ ಹಾಕಿದ್ದೀರಿ. ಆದರೆ ಅಲ್ಲಿ ಜನ ತಯಾರಾಗಿದ್ದರು, ಸಾಕಷ್ಟು ಹಣ ಖರ್ಚು ಮಾಡಿ ಅವರೆಲ್ಲಾ ತಯಾರಾಗಿದ್ದರು, ಆದಗೆ ಸರ್ಕಾರದವರು ಏನೋ ಒಂದು ಗಂಡಾಂತರ ಕಂಡುಕೊಂಡು, ಏನೋ ಅನಾನುಕೂಲವಾಗುತ್ತದೆ......

(ರೂಲಿಂಗ್ ಪಾರ್ಟಿ ಕಡೆಯಿಂದ ನಗು......)

ಶ್ರೀ ಡಿ. ದೇವರಾಜ್ ಅರಸ್.—ಯಾವುದರಲ್ಲಿ ?......

ಶ್ರೀ ಜೆ. ಹೆಚ್. ಪಟೇಲ್.—ತಾಲ್ಲೂಕು ಬೋರ್ಡ್, ಅಸೆಂಬ್ಲಿ ಚುನಾವಣೆಗಳಲ್ಲಿ ಗೆದ್ದಿರಿ, ಅದೃಷ್ಟವಶಾತ್ ತಾಲ್ಲೂಕುಬೋರ್ಡ್‌ನಲ್ಲಿ ಮತ್ತೆ ನಿಮ್ಮ ಕಡೆ ಕೆಲವು ಸೀಟ್‌ಗಳು ಬಂದು ನೀವು ಆದಕ್ಕೆ ಅದೇ ಗುಂಗಿನಲ್ಲಿದ್ದೀರೇನೋ ?

ಶ್ರೀ ಡಿ. ದೇವರಾಜ್ ಅರಸ್.—ಅದೃಷ್ಟವಶಾತ್ ನೀವು ಗೆದ್ದು ಬಂದಿರೇನೋ.

ಶ್ರೀ ಜೆ. ಎಚ್. ಪಟೇಲ್.—ತಾವು ಪಂಚಾಯಿತಿ ಚುನಾವಣೆಗಳನ್ನು ಮಾಡುವುದಕ್ಕೆ ಹೋಗಿದ್ದರೆ ಗೊತ್ತಾಗುತ್ತಿತ್ತು, ತಾಲ್ಲೂಕ್ ಬೋರ್ಡ್‌ನಲ್ಲಿ ಮಾಡಿದ ಚಮತ್ಕಾರ, ಅಸೆಂಬ್ಲಿ ಚುನಾವಣೆಯಲ್ಲಿ ಮಾಡಿದ ಚಮತ್ಕಾರ ಅಲ್ಲಿ ನಡೆಯುವುದಿಲ್ಲ. ಏತಕ್ಕೆಂದರೆ ಪ್ರತಿ ಹಳ್ಳಿಯಲ್ಲೂ ಒಂದೊಂದು ಜಾತಿಯ ಜನರ ರೆಪ್ರಜೆಂಟೇಷನ್ ಇರುತ್ತಾರೆ. ಅಲ್ಲಿ ನೀವು ಚಮತ್ಕಾರ ಮಾಡುವುದಕ್ಕಾಗುವುದಿಲ್ಲ. ಅಲ್ಲೆಲ್ಲಾ

ಜ್ಯಾತಿವಾರು ರೆಪ್ರಜೆಂಟೇಷನ್ ಇರುತ್ತಾರೆ. ಅಲ್ಲಿ ನಿಮ್ಮ ಚುನಾವಣಾ ಘೋಷಣೆಗೆ ಜನ ಬೆಂಬಲ ಕೊಡುವುದಿಲ್ಲ, ಅವರು ಏನು ಕೆಲಸ ಮಾಡುತ್ತಾರೆ, ಪಂಚಾಯಿತಿ ಮೆಂಬರ್ ಆಗಿ ಕೆಲಸ ಮಾಡುತ್ತಾರೋ ಇಲ್ಲವೋ, ಅವರಿಗೆ ಆ ಅರ್ಹತೆ ಇದೆಯೋ ಇಲ್ಲವೋ ಎನ್ನುವುದನ್ನೆಲ್ಲಾ ಅವರು ನೋಡುತ್ತಾರೆ. ಅಸೆಂಬ್ಲಿ ಚುನಾವಣೆಗಳಲ್ಲಿಯಾದರೆ ಮನುಷ್ಯ ದಾರಿ ತಪ್ಪಿಬಿಡುತ್ತಾನೆ. ಇನ್ನು ಯಾವುದ್ಯಾವುದರ ಕಡೆಗೋ ಮನಸ್ಸು ಹೋಗಿ ಬಿಡುತ್ತದೆ, ಪಂಚಾಯಿತಿ ಚುನಾವಣೆಗಳಲ್ಲಿ ಆ ರೀತಿ ಏನೂ ಆಗುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅದು ಮಾನ್ಯ ಸದಸ್ಯರಿಗೂ ಅನ್ವಯ ಆಗುತ್ತದೆ.

ಶ್ರೀ ಜೆ. ಎಚ್. ಪಟೇಲ್.—ಅವರಿಗೆ ಮಾತ್ರ ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ್ ಅರಸ್.—ಪ್ರಾಮಾಣಿಕವಾಗಿ ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಿರುವುದರಿಂದ ಅವರಿಗೆ ಅಭಿನಂದಿಸುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಈ ತರಹವಾಗುವುದರಿಂದ, ಅದರ ದುಷ್ಪರಿಣಾಮ ಏನಾಗುತ್ತದೆಂದು ಚುನಾವಣೆಗಳು ಎಂದರೆ ಹುಡುಗರು ಪರೀಕ್ಷೆಗೆ ಡೇಟ್ ಅನೌನ್ಸ್ ಮಾಡಿದಾಗ ಯಾವ ರೀತಿಯಾಗಿ ತಯಾರಾಗುತ್ತಾರೋ ಹಾಗೆ ಆ ಜನಗಳು ತಯಾರಾಗಿದ್ದರು. ಅದಕ್ಕಾಗಿ ಅವರುಗಳು ಸಾಕಷ್ಟು ಹಣವನ್ನು ಖರ್ಚ ಮಾಡಿಕೊಂಡಿದ್ದರು. ಇದನ್ನು ನೋಡಿ ಅಲ್ಲಿಯ ಒಂದು ವಾತಾವರಣವನ್ನು ನೋಡಿ ಭಯ ಪಟ್ಟುಕೊಂಡು ಮಳೆ ಬೀಳುತ್ತದೆಂದು ಎಂ.ಎಲ್.ಎ.ಗಳು ಪತ್ರ ಬರೆದಿದ್ದಾರೆ ಎನ್ನುವ ಒಂದೇ ಒಂದು ಸಣ್ಣ ಕಾರಣಕ್ಕಾಗಿ ಚುನಾವಣೆಗಳನ್ನು ಮುಂದಕ್ಕೆ ಹಾಕುವುದು ಅಷ್ಟು ಸೂಕ್ತವಲ್ಲ. ಕಾನೂನನ್ನು ಇಷ್ಟು ಹಗುರವಾಗಿ ತಾವು ತೆಗೆದುಕೊಳ್ಳಬಾರದು. ಚುನಾವಣೆಗಳಿಗೆ ಕ್ಯಾಲೆಂಡರ್ ಆಫ್ ಈವೆಂಟ್ಸ್ ತಯಾರಾಗದೇ ಇದ್ದಾಗ ಮುಂದಕ್ಕೆ ಹಾಕಿದ್ದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ. ಅದರೆ ತಾವು ಆಗ ಮಾಡಿದ ಕ್ರಮವೇನಿದೆ? ಒಂದು ಕ್ಷುಲಕ ಕಾರಣಕ್ಕೋಸ್ಕರ ತಾವು ಮುಂದಕ್ಕೆ ಹಾಕಿದ್ದು ಸರಿಯಲ್ಲವೆಂದು ನನಗನ್ನಿಸುತ್ತದೆ. ಇನ್ನು ತಾವು ಈ ಆರ್ಡಿನೆನ್ಸ್ ಉಪಯೋಗ ಮಾಡುವ ಕ್ರಮವೇನಿದೆ ಅದನ್ನು ಆದಷ್ಟು ಕಡಿಮೆ ಮಾಡಬೇಕಾಗಿದೆ. ಆರ್ಡಿನೆನ್ಸ್ ಎಂದರೆ ಏನೋ ಒಂದು ತುರ್ತಾಗಿ ಉಪಯೋಗಿಸತಕ್ಕ ಒಂದು ಅಸ್ತ್ರ. ಆದರೆ ಅದನ್ನು ಹ್ಯಾಂಡ್ ಮೇಡ್ ಮಾಡಿಕೊಂಡು ಕರೆದ ಕೂಡಲೇ ಕೂಗಿದಾಕ್ಷಣವೇ ಬರುವ ವಸ್ತುವಾಗಿ ಮಾಡಿಕೊಳ್ಳಬಾರದು. ಕೌನ್ಸಿಲ್, ಅಸೆಂಬ್ಲಿ ಇಲ್ಲದಿದ್ದಾಗ ಏನೋ ನಿರ್ವಾಹವಿಲ್ಲದೆ ಇದ್ದಾಗ ಅದನ್ನು ತುರ್ತು ಆಗಿದ್ದಾಗ ಮಾತ್ರ ಜಾರಿಗೆ ತರಬೇಕು. ಅಸೆಂಬ್ಲಿ, ಕೌನ್ಸಿಲ್ ನಡೆಯುತ್ತಿರುವಾಗ ಸುಮ್ಮನೆ ಇದ್ದು, ಸೆಷನ್ಸ್ ಮುಗಿದ ಕೂಡಲೇ ಆರ್ಡಿನೆನ್ಸ್ ಇಷ್ಯು ಮಾಡುವಂಥ ಕ್ರಮವೇನಿದೆ ಆ ರೀತಿ ಮಾಡಬಾರದು. Ordinance is a rare weapon and it should not be used so often and so meaninglessly. ಆ ರೀತಿ ಮಾಡಬಾರದು. ಆರ್ಡಿನೆಸ್ಸ್ ಮಾಡತಕ್ಕ ಕ್ರಮ ಜನರ ಮನಸ್ಸಿನಲ್ಲಿ ಒಂದು ಆಶೆ ಹುಟ್ಟಿಸಿ ನಿರಾಶೆ ಮಾಡತಕ್ಕದ್ದು, ಮತ್ತು ರಾಜಕೀಯ ನಾಟಕವನ್ನು ಆಡುವುದು ಬೇಡ, ಈ ತರಹ ಮುಂದೆ ಮಾಡಬೇಡಿ ಎಂದು ಸಲಹೆ ಕೊಟ್ಟು ನನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).—ಮಾನ್ಯ ಅಧ್ಯಕ್ಷರೇ, ನಾನು ಮೊನ್ನೆ ದಿವಸ ಮಾತ ನಾಡುತ್ತಾ ಇರುವಾಗ ಮಾನ್ಯ ಮುಖ್ಯಮಂತ್ರಿಗಳವರಲ್ಲಿ ಒಂದು ರಿಕ್ವೆಸ್ಟ್ ಮಾಡಿಕೊಂಡಿದ್ದೆ, ಈ ರಾಜ್ಯದಲ್ಲಿ ರೂಲ್ ಆಫ್ ಲಾ ಕಾನೂನು ರಾಜ್ಯ ಮಾಡಬೇಕಾದರೆ ಕಾನೂನನ್ನು ನಿಮ್ಮ ಕೈಗೆ ತೆಗೆದು ಕೊಂಡು ಮನಸ್ಸಿಗೆ ಬಂದ ಹಾಗೆ ಉಪಯೋಗ ಮಾಡಿದ್ದೀರಿ, ಆ ರೀತಿ ಮಾಡಬೇಡಿ ಎನ್ನುವುದಕ್ಕೆ ಉದಾಹರಣೆಗಳನ್ನು ಕೊಟ್ಟು ಹೇಳಿದ್ದೇನೆ. ಜೂನ್ ೩೦ಕ್ಕೆ ಚುನಾವಣೆ ಇದ್ದುದನ್ನು ಜುಲೈ ೮ಕ್ಕೆ ಇಟ್ಟಿದ್ದೀರಿ, ಆ ರೀತಿ ಚುನಾವಣೆಯನ್ನು ಮುಂದಕ್ಕೆ ಹಾಕುವುದಕ್ಕೆ ಅಷ್ಟು ಮಹತ್ವವೇನೂ ಇರಲಿಲ್ಲ. ತಾವು ಈ ರೀತಿ ಚುನಾವಣೆಯನ್ನು ಮುಂದಕ್ಕೆ ಹಾಕುವ ಉದ್ದೇಶವೇನಿದೆ ಅದು ವಾಸ್ತವಿಕವಾಗಿ ದುರುದ್ದೇಶದಿಂದ ಕೂಡಿದೆ. ಸೆಕ್ಷನ್ ೭ ಸಬ್ ಕ್ಲಾಸ್ (೩)ರಲ್ಲಿ, Every election of members shall be subject to the control and supervision of the Government and it shall be lawfull for the Government to issue directions regarding all matters connected with the elections including directions for cancellation and modification of the calendar of events or postpone-

ment of the poll.'' ಆದುದರಿಂದ ತಾವು ಇವತ್ತು ಮಾಡಿರತಕ್ಕಂಥದ್ದು ಏನಿದೆ ಅದು ಡೆಮಾಕ್ರಸಿಯ ವಿರುದ್ಧವಾಗಿದೆ, ರೂಲ್ ಆಫ್ ಲಾ ಗೆ ವಿರುದ್ಧವಾಗಿ ಮಾಡಿದ್ದೀರಿ ಈ ರೀತಿ ಸರ್ಕಾರ ಅಧಿಕಾರವನ್ನು ದುರುಪಯೋಗ ಮಾಡಿಕೊಂಡರೆ ಸರ್ಕಾರಕ್ಕೆ ಖಂಡಿತವಾಗಿಯೂ ಒಳ್ಳೆಯ ಹೆಸರು ಬರುವುದಿಲ್ಲವೆಂದು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳವರು ಇಲ್ಲಿಯೇ ಇದ್ದಾರೆ ಸ್ವಾಮಿ, ತಮಗೆ ನಾನು ಹೇಳುತ್ತಿದ್ದೇನೆ ತಾವು ಡೆಮಾಕ್ರಸಿಯ ವಿರುದ್ಧ, ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ಮಾಡುವುದು ಸರಿಯಲ್ಲವೆನ್ನುವ ಮಾತನ್ನು ತಿಳಿಸುತ್ತಿದ್ದೇನೆ. ಅದಕ್ಕೆ ತಮಗೊಂದು ಉದಾಹರಣೆಯನ್ನು ಕೊಡುವುದಾದರೆ ಹುಲಕೋಟೆಯಲ್ಲಿ ಏನಾಯಿತು ಎಂಬುದಕ್ಕೆ ತಮಗೊಂದು ಉದಾಹರಣೆಯನ್ನು ಕೊಡುತ್ತಿದ್ದೇನೆ. ಶ್ರೀ ಕೆ. ಎಚ್. ಪಾಟೀಲರ ಊರಾದ ಗದಗ್, ಹುಲಕೋಟೆಯಲ್ಲಿ ಪಂಚಾಯಿತಿ ಎಲೆಕ್ಷನ್ ಇರುವುದಕ್ಕಿಂತ ಮುಂಚೆ ಅಂದರೆ ಕೇವಲ ೨ ದಿವಸ ಮುಂಚೆ ಪೋಸ್ಟ್‌ಪೋನ್ ಮಾಡುವಂಥಾ ಅವಶ್ಯಕತೆಯಾದರೂ ಏನಿತ್ತು ? ಆ ರೀತಿ ಪೋಸ್ಟ್‌ಪೋನ್ ಮಾಡುವುದಕ್ಕೆ ಕಾರಣವೇನು? ನೀವು ಕಾನೂನಿಗೆ ವಿರುದ್ಧವಾಗಿ, ನೈತಿಕ ಹಕ್ಕಿನ ವಿರುದ್ಧವಾಗಿ ಮತ್ತೆ ಸರ್ಕಾರದವರ ಏನೊಂದು ವಾಸ್ತವಿಕವಾದ ಕರ್ತವ್ಯವಿದೆ ಅದರ ವಿರುದ್ಧವಾಗಿ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದೀರಿ ಎಂಬುದು ಈ ಒಂದು ಉದಾಹರಣೆಯಿಂದ ಸ್ಪಷ್ಟವಾಗಿ ಗೊತ್ತಾಗುತ್ತಿದೆ, ಈ ಪ್ರಕಾರ ಕಾನೂನಿನ, ಅಧಿಕಾರದ ದುರುಪಯೋಗ ಮಾಡಬಾರದೆಂದು ಹೇಳಬಯಸುತ್ತೇನೆ.

ಇನ್ನು ತಾವು ಕಾನೂನಿಗೆ ಎಷ್ಟೊಂದು ಅಮೆಂಡ್‌ಮೆಂಟ್ ತರುತ್ತಿರುವುದನ್ನು ನೋಡಿದರೆ ನಿಜವಾಗಿಯೂ ತಾವು ಆ ರೀತಿ ಮಾಡಿದರೆ ಕಾನೂನಿಗೆ ಬೆಲೆ ಇರುವುದಿಲ್ಲ ಮತ್ತು ಆ ರೀತಿ ಶಾಸನ ಸಭೆಗಳಲ್ಲಿ ಪಾಸ್ ಮಾಡತಕ್ಕವರಿಗೂ ಬೆಲೆ, ಮತ್ತು ಗೌರವವಿರುವುದಿಲ್ಲ. ಒಂದು ಕಾನೂನನ್ನು ಮಾಡಬೇಕಾದರೆ ಅದನ್ನು ಚೆನ್ನಾಗಿ ವಿಚಾರ ಮಾಡಿ ಅದಕ್ಕೆ ಪುನಃ ೧೦, ೨೦ ವರ್ಷಗಳ ತನಕ ತಿದ್ದುಪಡಿ ಆಗಬಾರದು ಆ ರೀತಿ ತಾವು ಕಾನೂನನ್ನು ತರಬೇಕು. ಆದರೆ ನಮಗೆ ಆಶ್ಚರ್ಯವಾಗುತ್ತಿದೆ, ನಮ್ಮ ರಾಜ್ಯದಲ್ಲಿ ಇವತ್ತೊಂದು ಕಾನೂನು ತಂದರೆ ನಾಳೆ, ನಾಡಿದ್ದೇ ಅದಕ್ಕೊಂದು ತಿದ್ದುಪಡಿಯನ್ನು ತರುತ್ತಿದ್ದಾರೆ. ಯಾವುದು ಮನಸ್ಸಿಗೆ ಬಂತೋ ಆ ಪ್ರಕಾರ, ಆ ಸಮಯಕ್ಕೆ ಒಂದು ತಿದ್ದುಪಡಿ ತರುವ ಒಂದು ಕೆಟ್ಟ ಅಭ್ಯಾಸವಾಗಿ ಹೋಗಿಬಿಟ್ಟಿದೆ. ಆ ಪ್ರಕಾರ ಮಾಡಬಾರದೆಂದು ಹೇಳುತ್ತೇನೆ. ಪವರ್ ಬಗ್ಗೆ ೨-೩ ಸಾರಿ ಹೇಳಿದ್ದೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳವರು ತಮ್ಮ ಉತ್ತರದಲ್ಲಿ ಅದರ ಬಗ್ಗೆ ಉತ್ತರವನ್ನು ಕೊಡುವುದನ್ನು ಮರೆತು ಬಿಟ್ಟರೆಂದು ಕಾಣುತ್ತದೆ, ಅಥವಾ ಅದಕ್ಕೆ ಅವರಿಂದ ಉತ್ತರವಿಲ್ಲವೆಂದು ಭಾಸವಾಗುತ್ತಿದೆ, ಅವರಿಗೆ ಅದಕ್ಕೆ ಉತ್ತರ ಕೊಡಲು ಅಷ್ಟೊಂದು ನೈತಿಕ ಧೈರ್ಯ, ವಾಸ್ತವಾಂಶವನ್ನು ಕನ್‌ವಿನ್ಸ್ ಮಾಡಬೇಕು ಎನ್ನುವುದೇ ಇಲ್ಲ. ತಾಲ್ಲೂಕು ಬೋರ್ಡ್‌ಗಳ ಚುನಾವಣೆ ನಡೆಸದೇ ಅಲ್ಲಿ ತಾವು ಅಡ್ಮಿನಿಸ್ಟ್ರೇಟರ್‌ಗಳನ್ನು ಹಾಕಿದ್ದೀರಿ ಇದರಿಂದ ಅಲ್ಲಿ ಹೇಗೆ ಕೆಲಸ ನಡೆದಿದೆ ಎಂದರೆ ಅಲ್ಲಿ ಎಲ್ಲಾ ಮಾಕರಿಯಾಗಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ತಾಲ್ಲೂಕ್ ಬೋರ್ಡ್ ಮತ್ತು ಪಂಚಾಯಿತಿ ಚುನಾವಣೆಗಳನ್ನು ತಾವು ನಡೆಸದೇ ಇವತ್ತು ನೀವು ಸೆಂಟ್ರಲ್ ಗೌರ್ನಮೆಂಟಿನವರಿಗೆ ಡಿಸೆಂಟ್ರಲೈಜೇಷನ್ ಆಫ್ ಪವರ್ ಮಾಡಬೇಕೆಂದು ಹೇಳುತ್ತಿದ್ದೀರಿ. ನೀವು ಇವತ್ತು ಎಲ್ಲಾ ಪವರ್‌ನ್ನು ಇಟ್ಟುಕೊಂಡು ಅದನ್ನು ಡಿಸೆಂಟ್ರಲೈಜ್ ಮಾಡದೇ ಕೇಂದ್ರದವರಿಗೇ ಹೇಳುತ್ತಿದ್ದೀರಿ, ಆ ರೀತಿ ಮಾಡುವುದರಿಂದ ನೈತಿಕವಾಗಿ ಬೆಲೆ ಬರುವುದಿಲ್ಲ. ಆದುದರಿಂದ ತಾವು ಆ ರೀತಿ ಮಾಡಬಾರದು, ಇವತ್ತು ನೀವು ಸಣ್ಣ ಸಣ್ಣ ಮ್ಯಾಟರ್‌ಗಳಲ್ಲೂ ಸಹ ಅಧಿಕಾರದ ದುರುಪಯೋಗ ಮಾಡುತ್ತಿದ್ದೀರಿ. ಗುಲ್ಬರ್ಗ ಕೋ-ಆಪರೇಟಿವ್ ಬ್ಯಾಂಕ್ ಆಗಲೀ ಇನ್ನಾವುದೇ ಬ್ಯಾಂಕ್ ಆಗಲೀ ಅದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಿ ಕೋ-ಆಪರೇಟಿವ್ ಆಕ್ಟ್‌ನಲ್ಲಿರತಕ್ಕಂಥ ರೂಲ್ ಆಫ್ ಲಾವನ್ನು ದುರುಪಯೋಗ ಮಾಡಿದೆ. ಇದು ಪ್ರಜಾಪ್ರಭುತ್ವ ತತ್ವದ ಪ್ರಕಾರ ಸರಿಯಲ್ಲ. ಸರ್ಕಾರ ತನ್ನ ಮನಸ್ಸಿಗೆ ಬಂದಂತೆ ಕಾನೂನು ಮಾಡುವುದಕ್ಕೆ ಹೋದರೆ ಮುಂದೆ ತುಂಬಾ ತೊಂದರೆ ಅನುಭವಿಸಬೇಕಾಗುತ್ತದೆ. ಆಗತಕ್ಕಂಥ ತೊಂದರೆಗಳನ್ನು ಸರಿಪಡಿಸಬೇಕಾದರೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿ ಬರುತ್ತದೆ. ಈ ಅಸೆಂಬ್ಲಿಯಲ್ಲಿ ನಿಮಗೆ ಮೆಜಾರಿಟಿ ಇದೆಯೆಂದು ತಿಳಿದುಕೊಂಡು ಬೆಳ್ಳಗೆ ಇರುವುದನ್ನೆಲ್ಲಾ ಕರ್‍ರಗೆ, ಕರ್‍ರಗೆ ಇರುವುದನ್ನೆಲ್ಲಾ ಬೆಳ್ಳಗೆ ಮಾಡುತ್ತಿದ್ದೀರಿ. ಈ ಬಗ್ಗೆ ಕರ್ನಾಟಕದ ಜನತೆ ನಿಮ್ಮನ್ನು ಕ್ಷಮಿಸುವುದಿಲ್ಲ. ಸ್ವಲ್ಪ ದಿವಸದಲ್ಲೇ ಪ್ರತಿಯೊಂದು ತಾಲ್ಲೂಕಿನಲ್ಲಿ, ಪ್ರತಿಯೊಂದು ಜಿಲ್ಲೆಯಲ್ಲಿ, ಪ್ರತಿಯೊಂದು ಹಳ್ಳಿಯಲ್ಲಿರತಕ್ಕಂಥ ಜನ ಒಗ್ಗಟ್ಟಾಗಿ ನಿಮ್ಮ ವಿರುದ್ಧವಾಗಿ ಸತ್ಯಾಗ್ರಹ ಮಾಡುತ್ತಾರೆ; ಅವರು ನಿಮ್ಮ ವಿರುದ್ಧ ಹೋರಾಟ ಮಾಡುವಂಥ ಕಾಲ ಬಂದೇ ಬರುತ್ತದೆ. ನೀವು ಸರಿಯಾದ ರೀತಿಯಲ್ಲಿ ನಡೆದುಕೊಂಡು ನಿಮ್ಮ ಹೆಸರನ್ನು ಉಳಿಸಿಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು.—ನೀವು ಜನತಾ ಪಾರ್ಟಿಯನ್ನು ಸೇರಿಬಿಟ್ಟರೆ ಒಳ್ಳೆಯದು.

ಶ್ರೀ ಭೀಮಣ್ಣ ಖಂಡ್ರೆ. ಇಲ್ಲ, ಇಲ್ಲ. ನಾನು ಜನತಾ ಪಾರ್ಟಿಯವರು ಹೇಗೆ ಅಧಿಕಾರ ಮಾಡುತ್ತಿದ್ದಾರೆ ಎಂದು ಪಾಯಿಂಟ್ಔಟ್ ಮಾಡಿ ಆಮೇಲೆ ಹೇಳುತ್ತೇನೆ. ಸೆಂಟ್ರಲ್‌ನಲ್ಲಿ ಜನತಾಪಾರ್ಟಿಯವರು ಇರಬಾರದು, ಇಲ್ಲೂ ಅವರು ಇರಬಾರದು.

ಶ್ರೀ ಡಿ. ದೇವರಾಜ್ ಅರಸ್.—ಅವರು ಅಲ್ಲಿ ಇರಬಾರದು ಎಂದರೆ ಅಲ್ಲಿ ಶ್ರೀ ಚವಾಣರು ಇರಬೇಕೇ ಶ್ರೀ ರೆಡ್ಡಿಯವರು ಇರಬೇಕೇ ?

ಶ್ರೀ ಭೀಮಣ್ಣ ಖಂಡ್ರೆ.—ಇದರಲ್ಲಿ ಯಾವಾಗ ಏನು ಆಗುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಅದೇನೇ ಇರಲಿ ಇವತ್ತಿನ ದಿವಸ ಮಹಾರಾಷ್ಟ್ರ ಬಾರ್ಡರ್‌ನಲ್ಲಿರತಕ್ಕಂಥ ನಮ್ಮ ಜನರನ್ನು ಅಲ್ಲಿಂದ ಓಡಿಸುತ್ತಿದ್ದಾರೆ. ಅಲ್ಲಿ ಅವರಿಗೆ ಜೀವನ ಮಾಡುವುದಕ್ಕೆ ಕಷ್ಟವಾಗುತ್ತಿದೆ. ಈವತ್ತು ಅವರಿಗೆ ನೀವು ಏನೂ ವ್ಯವಸ್ಥೆ ಮಾಡಿಲ್ಲ. ಆದ್ದರಿಂದ ನಿಮಗೆ ಬಹಳ ದಿವಸ ಆಯುಸ್ಸು ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ಪಂಚಾಯಿತಿಗೆ ಸಂಬಂಧಪಟ್ಟಹಾಗೆ ಈ ಆಕ್ಟ್‌ಗೆ ನೀವು ಏನು ಅಮೆಂಡ್‌ಮೆಂಟ್ ತಂದಿದ್ದೀರಿ, ಅದು ಸರಿಯಲ್ಲ ; ಅದನ್ನು ನಾನು ವಿರೋಧ ಮಾಡುತ್ತಿದ್ದೇನೆ. ಈ ಒಂದು ಅಮೆಂಡ್‌ಮೆಂಟನ್ನು ನೀವು ವಾಪಸ್ಸು ತೆಗೆದುಕೊಳ್ಳಿ. ಮತ್ತು ಈ ಬಗ್ಗೆ ನಾನು ಏನೇನು ಸಲಹೆಯನ್ನು ಕೊಟ್ಟಿದ್ದೇನೆ ಅದನ್ನು ವಿಚಾರ ಮಾಡಿ ಎಂದು ಹೇಳುತ್ತೇನೆ.

† ಶ್ರೀ ಎಸ್. ಎಂ. ಶೀರ್‍ನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ತಂದಿರತಕ್ಕಂಥ ತಿದ್ದುಪಡಿಯನ್ನು ನಾನು ಸಂಪೂರ್ಣವಾಗಿ ಬೆಂಬಲಿಸಿ ಈ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಸದಸ್ಯರಾದ ಜೆ. ಹೆಚ್. ಪಟೇಲರು, ಅವರಂತಹ ಬುದ್ಧಿವಂತರು ತಮ್ಮ ವಿತ್ತಂಡ ವಾದಗಳಿಂದ ಈ ಅಮೆಂಡ್‌ಮೆಂಟನ್ನು ವಿರೋಧಿಸುತ್ತೇನೆ ಎಂದು ಹೇಳಿರತಕ್ಕಂಥಾದ್ದನ್ನು ನೆನೆಸಿಕೊಂಡರೆ ನನಗೆ ಆಶ್ಚರ್ಯವಾಗುತ್ತಿದೆ. ಈ ಬಗ್ಗೆ ವಿರೋಧಕ್ಕೆ ವಿರೋಧ ಎಂದು ಹೇಳತಕ್ಕಂಥ ನೀತಿಯನ್ನು ಇಲ್ಲಿ ಸ್ವಲ್ಪವಾದರೂ ಅನುಸರಿಸಿದರೆ ಒಳ್ಳೆಯದೆಂದು ನನಗೆ ಅನ್ನಿಸುತ್ತದೆ. ಸರ್ಕಾರ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡ್ ಚುನಾವಣೆಯನ್ನು ಒಂದು ಖಚಿತವಾದ ತಾರೀಖಿನಲ್ಲಿ ಮಾಡಬೇಕು ಎಂದು ಘೋಷಣೆ ಮಾಡಿತು. ಹೀಗೆ ಘೋಷಣೆ ಮಾಡಿದಂಥ ಸಂದರ್ಭದಲ್ಲಿ ಮತ್ತು ಸುಮಾರು ಹತ್ತಾರು ವರ್ಷಗಳಿಂದಲೂ ಕರ್ನಾಟಕ ರಾಜ್ಯದಲ್ಲಿ ಮಳೆ ಆಗಿರಲಿಲ್ಲ. ಈ ವರ್ಷ ಆದಂಥ ಮಳೆ ಯಾವ ಕಾಲದಲ್ಲಿಯೂ ಆಗಲಿಲ್ಲ ಎಂಬುದನ್ನು ನಮ್ಮ ಮಾನ್ಯ ಸ್ನೇಹಿತರು ಅರ್ಥಮಾಡಿಕೊಳ್ಳಬೇಕು ಅವುಗಳ ಎಲೆಕ್ಷನ್ ಮಾಡುವ ವಿಚಾರದಲ್ಲಿ ಒಂದು ಖಚಿತವಾದ ನೋಟಿಫಿಕೇಷನ್ ಆಗುವಂಥ ಕಾಲದಲ್ಲಿ ಮಳೆಯು ಚಿನ್ಹೆಯೆ ಇರಲಿಲ್ಲ. ವರುಣನ ಆಶೀರ್ವಾದದಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ ಮೇ ತಿಂಗಳಲ್ಲಿ ಮಳೆಗಾಲ ಪ್ರಾರಂಭವಾಯಿತು. ಈ ಕಾರಣಕ್ಕಾಗಿ ಸರ್ಕಾರ ಜನರ ಅಭೀಷ್ಟದಂತೆ ಮುಂದಕ್ಕೆ ಹಾಕಿರತಕ್ಕಂಥ ಚುನಾವಣೆಯನ್ನು ಇನ್ನೂ ಮುಂದಕ್ಕೆ ಹಾಕುವುದಕ್ಕೆ ಮನಸ್ಸು ಮಾಡಿತು. ಇದರಲ್ಲಿ ಸರ್ಕಾರ ಒಂದು ಸಾರಿ ನೋಟಿಫಿಕೇಷನ್ ಹೊರಡಿಸಿ ಅದನ್ನು ಡೆಪ್ಯೂಟಿ ಕಮಿಷನರ್ ಜಾರಿಗೆ ಕೊಟ್ಟಮೇಲೆ ಪುನಃ ಎಲೆಕ್ಷನ್ ಅನ್ನು ಮುಂದಕ್ಕೆ ಹಾಕುವುದಕ್ಕೆ ಸರ್ಕಾರಕ್ಕೆ ಅಧಿಕಾರವಿರುವುದಿಲ್ಲ. ಈ ಒಂದು ಅಧಿಕಾರವನ್ನು ಪಡೆಯುವುದಕ್ಕಾಗಿ, ಅದಕ್ಕೆ ಒಂದು ತಿದ್ದುಪಡಿಯನ್ನು ತರುವುದಕ್ಕಾಗಿ ಒಂದು ಆರ್ಡಿನೆನ್ಸನ್ನು ಹೊರಡಿಸಿದ್ದಾರೆ. ಅದಕ್ಕಾಗಿ ನಮ್ಮ ಮಾನ್ಯ ಸ್ನೇಹಿತರು ಟೀಕೆ ಮಾಡಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಕನ್ನಡದಲ್ಲಿ ಒಂದು ಗಾದೆ ಇದೆ, ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಕಂಡಂತೆ ಎಂದು. ಅವರು ಟೀಕೆ ಮಾಡಿರುವುದು ಆ ರೀತಿ ಆಯಿತು. ಗಂಡಹೆಂಡತಿಯರಿಬ್ಬರು ಒಂದು ಸಾರಿ ಬಹಳ ಜಗಳ ಮಾಡಿಕೊಂಡುಬಿಟ್ಟರು, ಗಂಡನಿಗೆ ಹೆಂಡತಿಯ ಮೇಲೆ ಏನೇನೂ ವಿಶ್ವಾಸ ಇಲ್ಲ, ಅವಳ ಮೇಲೆ ವಿಶ್ವಾಸವಿಲ್ಲದಿದ್ದರೂ ಕೂಡ, ಹೆಂಡತಿ ಕೆನೆ ಮೊಸರನ್ನು ಊಟಕ್ಕೆ ಬಡಿಸಿದಾಗ ಗಂಡ ಇದರಲ್ಲಿ ಕಲ್ಲು ಹೇಗೆ ಬಂತು ಎಂದು ಹೆಂಡತಿಗೆ ಹೊಡೆದ. ಹೀಗೆ ಒಳ್ಳೆಯದೇ ಆಗಲಿ, ಕೆಟ್ಟದ್ದು ಆಗಲಿ ಪ್ರತಿಯೊಂದಕ್ಕೂ ಹೊಡೆತ ಹೊಡೆಯುವುದು, ಟೀಕೆ ಮಾಡುವುದು ನಮ್ಮ ಸ್ನೇಹಿತರ ಸ್ವಭಾವ, ಆದರಲ್ಲೂ ಮಾನ್ಯ ಮಂತ್ರಿಯವರಾದ ಪ್ರಭಾಕರ್‌ರವರು ವಿನಯಶಾಲಿಗಳು ಒಳ್ಳೆಯ ಮನುಷ್ಯರು, ಅವರು ಮಂಡಿಸಿರತಕ್ಕಂಥ ಈ ಅಮೆಂಡ್‌ಮೆಂಟ್‌ಗಾದರೂ ಬೆಂಬಲ ಕೊಡುತ್ತಾರೆ ಎಂದರೆ ಅದಕ್ಕೆ ಬೆಂಬಲ ಅವರುಕೊಡಲಿಲ್ಲ ಅವರು ಈ ರೀತಿ ವಿತ್ತಂಡವಾದದಿಂದ ಇದನ್ನು ವಿರೋಧಿಸಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಸರ್ಕಾರದವರು ಏನಾದರೂ ಜೂನ್ ೩೦ನೇ ತಾರೀಖಿನಂದು ತಾಲ್ಲೂಕುಬೋರ್ಡ್ ಮತ್ತು ಪಂಚಾಯಿತಿಗಳ ಚುನಾವಣೆಯನ್ನು ಇಟ್ಟು

ಬಿಟ್ಟಿದ್ದರೆ ಮಲೆನಾಡಿನಿಂದ ಬರತಕ್ಕಂಥ ಶಾಸಕರಲ್ಲಿ ೧೦೦ರಲ್ಲಿ ೫ ಭಾಗದಷ್ಟು ಮಂದಿ ಕೂಡ ಓಟು ಹಾಕು ತ್ತಿರಲಿಲ್ಲ. ಏಕೆಂದರೆ ಅಲ್ಲಿ ಹಳ್ಳ-ಹೊಳೆ ಎಲ್ಲಾ ಕೂಡಿಕೊಂಡುಬಿಟ್ಟರೆ ಪೋಲಿಂಗ್ ಬೂತ್‌ಗೆ ಬರುವುದಕ್ಕೆ ಆಗುವುದಿಲ್ಲ. ಇಂತಹ ಒಂದು ದುರ್ಬರ ಪರಿಸ್ಥಿತಿಯಲ್ಲಿ ಚುನಾವಣೆಯ ಬಗ್ಗೆ ಯೋಚನೆ ಮಾಡು ವುದಕ್ಕೂ ಕೂಡ ಸಾಧ್ಯ ಇರಲಿಲ್ಲ. ಈ ವರ್ಷ ಶಾಸನಸಭಾ ಚುನಾವಣೆ ಮತ್ತು ತಾಲ್ಲೂಕುಬೋರ್ಡ್ ಚುನಾವಣೆಗಳು ಆಗಿಹೋದವು. ಆದರೆ ಪಂಚಾಯಿತಿಗಳ ಚುನಾವಣೆಗಳು ಇನ್ನೂ ಆಗಿಲ್ಲ. ಇದಕ್ಕೆ ಕಾರಣ ಏನು ಎಂಬುದನ್ನು ನಾನಾಗಲೇ ಹೇಳಿದ್ದೇನೆ. ಮಳೆಗಾಲದ ಸಮಯದಲ್ಲಿ ಪಂಚಾಯಿತಿಗಳ ಚುನಾವಣೆಗಳನ್ನು ಹಾಕಿಕೊಂಡರೂ ಸಹ ಜನರು ತಾನೇ ಇದರಲ್ಲಿ ಭಾಗವಹಿಸುತ್ತಾರೆ ? ಯಾರೂ ಭಾಗವಹಿಸುವುದಿಲ್ಲ, ಈ ಒಂದು ದೃಷ್ಟಿಯಿಂದ ಎಲ್ಲೆಲ್ಲಿ ಹೆಚ್ಚು ಮಳೆಯಾಗುತ್ತದೆಯೋ ಅಲ್ಲಿ ಪಂಚಾ ಯಿತಿಗಳ ಚುನಾವಣೆಯನ್ನು ಮುಂದೂಡಲು ಅನುಕೂಲವಾಗುವಂತೆ, ಸರ್ಕಾರ ಈ ಒಂದು ಅಧಿಕಾರ ವನ್ನು ತೆಗೆದುಕೊಳ್ಳಲು ಈ ಕಾನೂನನ್ನು ಮಾಡಿದ್ದಾರೆ, ಅಷ್ಟೇ ಹೊರತು ಬಹಳ ಬೇಗ ಚುನಾವಣೆ ನಡೆಸಿದರೆ ಪಕ್ಷಕ್ಕೆ ಸೋಲು ಉಂಟಾಗುತ್ತದೆ ಎಂಬ ಭಯದಿಂದ ಆಗಲೀ ಅಥವಾ ಇನ್ನಾವುದೇ ಕಾರಣ ಕ್ಕಾಗಿ ಈ ತಿದ್ದುಪಡಿಯನ್ನು ಮಾಡಿರತಕ್ಕಂಥಾದ್ದು ಅಲ್ಲ ಎಂಬುದನ್ನು ಮಾನ್ಯ ಭೀಮಣ್ಣ ಖಂಡ್ರೆ ಯವರು ಅರ್ಥ ಮಾಡಿಕೊಳ್ಳಬೇಕು. ಅವರು ಮಾತನಾಡತಕ್ಕಂಥ ಕಾಲದಲ್ಲಿ ಸರ್ಕಾರ ೧೦ ವರ್ಷಗಳ ಕಾಲ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸದೇ ಆಡಳಿತಾಧಿಕಾರಕ್ಕೆ ಮತ್ತು ಪ್ರಜಾಪ್ರಭುತ್ವ ತತ್ವಕ್ಕೆ ಮಾರಕವಾಗಿತ್ತು ಎಂದು ಅವರು ಈ ಸದನದಲ್ಲಿ ಕೂಗಿ ಹೇಳಿದರು. ಅವರ ಪಕ್ಷ ನಮ್ಮನ್ನು ಬಿಟ್ಟು ಹೋಗಿ ಎಷ್ಟು ವರ್ಷವಾಯಿತು ಎಂದು ನಾನು ಅವರನ್ನು ಕೇಳುವುದಕ್ಕೆ ಬಯಸುತ್ತೇನೆ ಯಾರನ್ನೇ ಆಗಲಿ ಟೀಕೆ ಮಾಡುವುದಕ್ಕಿಂತ ಮುಂಚೆ ಯಾವಾಗಲೂ ನಮ್ಮ ಕಾಲ ಬುಡದಲ್ಲಿ ಏನಿದೆ ಎಂಬುದನ್ನು ನೋಡಿಕೊಳ್ಳಬೇಕು, ನಮ್ಮ ಕಾಲ ಬುಡದಲ್ಲಿ ಹೆಗ್ಗಣ ಬಿದ್ದಿರುತ್ತದೆ, ಇನ್ನೊಬ್ಬರ ಕಾಲ ಬುಡದಲ್ಲಿರುವ ಇಲಿಯನ್ನು ಓಡಿಸುವುದಕ್ಕೆ ಹೋಗುವುದು ಅದು ಸರಿಯಾದುದಲ್ಲ. ಪ್ರಜಾಪ್ರಭುತ್ವ ತತ್ವದ ಮಾರಕದ ಬಗ್ಗೆ ಮಾತನಾಡತಕ್ಕಂಥ ಮಾನ್ಯ ಸದಸ್ಯರು ರೆಡ್ಡಿ ಕಾಂಗ್ರೆಸ್, ಚಡ್ಡಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದರೂ, ಅದು ಹಿಂದೆ ನಮ್ಮ ಪಕ್ಷದ ಒಂದು ಅವಿಭಾಜ್ಯ ಅಂಗವಾಗಿರಲಿಲ್ಲವೇ, ಅವರ ಮೇಲೆ ಅವರು ಸಗಣಿಯನ್ನು ಎರೆಚಿಕೊಳ್ಳುತ್ತಾರೆಯೋ ಎಂದು ಅವರನ್ನು ಕೇಳಬಯಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ನಮ್ಮದು ಚಡ್ಡಿ ಕಾಂಗ್ರೆಸ್ ಅಲ್ಲ, ರೆಡ್ಡಿ ಕಾಂಗ್ರೆಸ್.

ಶ್ರೀಮತಿ ಎಸ್. ಪ್ರಮೀಳ.—ಸ್ವಾಮಿ ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ. ಈ ಸಭೆಯಲ್ಲಿ ಚಡ್ಡಿ ಕಾಂಗ್ರೆಸ್, ರೆಡ್ಡಿ ಕಾಂಗ್ರೆಸ್ ಎಂಬುದಾಗಿ ಉಪಯೋಗಿಸಬಹುದೇ ? ಮಾನ್ಯ ಸದಸ್ಯರು ಆ ರೀತಿ ಉಪಯೋಗಿಸಿದ್ದಾರೆ.

ಅಧ್ಯಕ್ಷರು.—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎಸ್. ಎಂ. ಶೀರ್‍ನಾಳಿ ಚಂದ್ರಶೇಖರ್.—ಈ ಕಾರಣದಿಂದಾಗಿ ಇವತ್ತು ಸರ್ಕಾರ ಅಧಿಕಾರ ವನ್ನು ತೆಗೆದುಕೊಡು ಈ ಒಂದು ಚುನಾವಣೆಯನ್ನು ಎಲ್ಲೆಲ್ಲಿ ನಡೆಸಲಿಕ್ಕೆ ಸಾಧ್ಯವಿಲ್ಲವೋ ಅಂತಹ ಪ್ರಾಂತ್ಯ ಗಳಲ್ಲಿ ಮಾತ್ರ ಚುನಾವಣೆಯನ್ನು ಮುಂದೂಡತಕ್ಕಂಥ ನೀತಿಯನ್ನು ಸರ್ಕಾರ ಹಾಕಿಕೊಂಡಿದೆ. ಅದೇ ರೀತಿ ನಮ್ಮ ಜಿಲ್ಲೆಯನ್ನು ತೆಗೆದುಕೊಂಡರು, ಹೊನ್ನಾಳಿ ಮತ್ತು ಚನ್ನಗಿರಿಯಲ್ಲಿ ಚುನಾವಣೆಯನು ನಡೆಸಬಹುದೆಂದು ಮಾಡಿದ್ದಾರೆ ಮಲೆನಾಡಿನ ಪ್ರಾಂತ್ಯಗಳು ಯಾವುವು ಇವೆ, ಅಲ್ಲಿ ಮಾತ್ರ ಚುನಾವಣೆ ಯನ್ನು ಮುಂದೂಡಿದ್ದಾರೆ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. ಈ ದೃಷ್ಟಿಯಿಂದ ಈ ತಿದ್ದು ಪಡಿಗೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶವನು ಕಲ್ಪಿಸಿಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಬಸವನಗುಡಿ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಮುಂದೆ ಮಂಡಿಸಿರತಕ್ಕಂಥ ಕರ್ನಾಟಕ ವಿಲೇಜ್ ಪಂಚಾಯಿತಿ ಮತ್ತು ಲೋಕಲ್ ಬೋರ್ಡ್ಸ್ (ಅಮೆಂಡ್‌ಮೆಂಟ್) ಬಿಲ್ ೧೯೭೮ ಇದನ್ನು ವಿರೋಧಿಸಬೇಕಾಗುತ್ತದೆ. ಇದನ್ನು ವಿರೋಧಿಸಬೇಕಾದ ಕಾರಣವಾದರೂ ಇಷ್ಟೆ, ಇದರಲ್ಲಿ ತಂದಿರತಕ್ಕಂಥ ತಿದ್ದುಪಡಿ ಅಮೆಂಡ್‌ಮೆಂಟ್ ಸೆಕ್ಷನ್ ೭ ಸಬ್ ಸೆಕ್ಷನ್ ೩ ರಲ್ಲಿ ಯಾವ ರೀತಿ ಹೇಳಿದ್ದಾರೆಂದರೆ,—

"Every election of members shall be subject to the control and supervision of the Government and it shall be lawful for

the Government to issue directions regarding all matters connected with the elections including directions for cancellation and modification of the calendar of events or postponement of the poll''.

ಗಾಂಧೀಜಿಯವರು ಹೇಳುತ್ತಿದ್ದಂತೆ ಗ್ರಾಮ ಪಂಚಾಯಿತಿ, ರಾಮರಾಜ್ಯವಾಗಬೇಕೆಂಬ ಒಂದು ಚಿತ್ರವನ್ನು ಇಟ್ಟುಕೊಂಡು ಈ ಕಾಯಿದೆ ಜಾರಿಗೆ ಬಂತು. ಈ ಒಂದು ದೃಷ್ಟಿಯಿಂ ದರಾಮರಾಜ್ಯವಾಗ ಬೇಕಾದ ಪಕ್ಷದಲ್ಲಿ ರಾಜಕೀಯವನ್ನು ನಡೆಸತಕ್ಕಂಥಾದ್ದು ಸರಿಯಾದುದಲ್ಲವೆಂಬುದು ಸ್ಪಷ್ಟವಾಗಿಕಾಣುತ್ತದೆ ಗ್ರಾಮದಲ್ಲಿ ಒಗ್ಗಟ್ಟು ಇರಬೇಕು, ಗ್ರಾಮದಲ್ಲಿ ಯಾವುದೇ ಒಳ್ಳೆಯ ಕೆಲಸಗಳು ಆಗಬೇಕಾದರೆ ಅಲ್ಲಿರುವ ಎಲ್ಲರ ಸಲಹೆಯನ್ನು ಒಂದು ಸಾಮೂಹಿಕವಾಗಿ ತೆಗೆದುಕೊಂಡು ಗ್ರಾಮದ ಅಭಿವೃದ್ಧಿಯನ್ನು ನಡೆಸಿ ಕೊಂಡು ಬರಬೇಕೆಂಬುದು ಒಂದು ಉತ್ತಮ ಉದ್ದೇಶ. ಆ ಉದ್ದೇಶದಿಂದ ಪಂಚಾಯಿತಿ ರಾಜ್ಯ ಮತ್ತು ಲೋಕಲ್ ಬೋರ್ಡ್ ಎಂಬುದಾಗಿ ಜಾರಿಗೆ ಬಂತು. ಸರ್ಕಾರ ನಾನಾ ಕಾರಣಗಳಿಂದ ಅನೇಕ ವರ್ಷಗಳ ಕಾಲ ಗ್ರಾಮ ಪಂಚಾಯಿತಿಗೆ ಚುನಾವಣೆಯನ್ನು ನಡೆಸದೇ ಹಾಗೆ ಮುಂದಕ್ಕೆ ಹಾಕಿಕೊಂಡು ಬಂತು. ''Every election of members shall be subject to the control and supervision of the Government ಎಲ್ಲಿಯವರೆಗೆ ಸರ್ಕಾರ ತನ್ನ ಪಕ್ಷದ ವತಿಯಿಂದ ಈ ಗ್ರಾಮ ಪಂಚಾಯಿತಿಗೆ ಚುನಾವಣೆ ಮಾಡುತ್ತದೋ, ಅಲ್ಲಿಯವರೆಗೂ ಸರ್ಕಾರ ಚುನಾವಣೆ ನಡೆಸ ತಕ್ಕಂಥ ಪೂರ್ಣ ಅಧಿಕಾರವನ್ನು ತನ್ನ ಕೈಯಲ್ಲಿ ಇಟ್ಟುಕೊಂಡರೆ, ಎಲ್ಲಿ ಚುನಾವಣೆ ಸಮರ್ಪಕವಾಗಿ ನಡೆಯುತ್ತದೆ ? ಸರಿಯಾಗಿ ನಡೆಯುತ್ತದೆ ? ನ್ಯಾಯವಾಗಿ ನಡೆಯುತ್ತದೆ ? ಎನ್ನುವುದರ ಬಗ್ಗೆ ನಾವು ನೋಡಬೇಕಾಗಿದೆ. ಇದರಲ್ಲಿ ರಾಜಕೀಯ ಉದ್ದೇಶ ಎಷ್ಟರಮಟ್ಟಿಗೆ ಇದೆ ಎಂಬುದು ಗೊತ್ತಾಗುತ್ತದೆ. ಮಳೆಗಾಲದಲ್ಲಿ ಚುನಾವಣೆ ನಡೆಸುವುದಕ್ಕಾಗುವುದಿಲ್ಲ. ಬಹಳ ಕಷ್ಟ ಓಟು ಮಾಡತಕ್ಕಂಥವರಿಗೆ ಕಷ್ಟವಾಗುತ್ತದೆ. ಚುನಾವಣೆಗೆ ನಿಂತುಕೊಂಡಿರುವವರಿಗೂ ಕಷ್ಟವಾಗುತ್ತದೆ ಆದ್ದರಿಂದ ಚುನಾವಣೆ ಯನ್ನು ಕೆಲವು ಜಾಗಗಳಲ್ಲಿ ಮುಂದೂಡಬೇಕಾಯಿತು ಎಂಬುದಾಗಿ ಹೇಳಿದ್ದಾರೆ. ಮಂಗಳೂರಿನಲ್ಲಿ ಮಳೆ ಇದೆ. ಚುನಾವಣೆ ಮಾಡುವುದಕ್ಕಾಗುವುದಿಲ್ಲ. ಆದರೆ ಉಲುಕೋಟೆಯಲ್ಲಿ ಯಾವ ಮಳೆ ಇದೆ? ಈ ಎರಡನ್ನು ಹೋಲಿಕೆ ಮಾಡಿ ನೋಡಿದಾಗ ರಾಜಕೀಯ ಉದ್ದೇಶ ಇಟ್ಟುಕೊಂಡು ಆಡಳಿತ ನಡೆಸ ತಕ್ಕಂಥ ಸರ್ಕಾರ ಈ ಚುನಾವಣೆಯನ್ನು ಮುಂದೂಡಿ ಮಾಯಾ, ಮಂತ್ರ ಮಾಡತಕ್ಕಂಥಾದ್ದು ಖಂಡಿತ ವಾಗಿ ಸರಿಯಾದುದಲ್ಲ. ಈಗ ರಾಜ್ಯ ಸರ್ಕಾರದ ಆಡಳಿತ ಇರುವಾಗ ತಾನು ಸ್ವೇಚ್ಛೆಯಾಗಿ ಆಡಳಿತವನ್ನು ನಡೆಸತಕ್ಕಂಥ ಉದ್ದೇಶದಿಂದ ಚುನಾವಣೆಯನ್ನು ಮುಂದೂಡಿಕೊಂಡು ಬಂದಿದ್ದಾರೆ. ಇದರಿಂದ ಎಲೆಕ್ಷನ್ ಕಮೀಷನರ್ ನಿಸ್ಪಕ್ಷಪಾತವಾಗಿ ಕೆಲಸಮಾಡಬೇಕೆಂದು ಹೇಳುವಾಗ, ಎಲ್ಲಿಯವರೆಗೆ ರಾಜಕೀಯ ಪಕ್ಷ ಅಧಿಕಾರದಲ್ಲಿರುತ್ತದೋ ಅಲ್ಲಿಯವರೆಗೂ ಕೂಡ ನಿಸ್ಪಕ್ಷಪಾತವಾಗಿ ಕೆಲಸಮಾಡತಕ್ಕಂಥಾದ್ದು ಖಂಡಿತವಾಗಿಯೂ ಆಗುವುದಿಲ್ಲ. ಸರ್ಕಾರ ತನ್ನ ಪ್ರಿಸ್ಟೀಜನ್ನನ್ನು ಉಳಿಸಿಕೊಳ್ಳುವುದಕ್ಕೆ, ತನ್ನ ಪಕ್ಷ ವನ್ನು ಉಳಿಸಿಕೊಳ್ಳುವುದಕ್ಕೆ, ತನ್ನ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲವನ್ನು ಕೊಡುವುದಕ್ಕೋಸ್ಕರ ಉಪ ಯೋಗಿಸುತ್ತಿದ್ದಾರೆ ಹೊರತು, ನಿಸ್ಪಕ್ಷಪಾತವಾಗಿ ಈಗ ಗ್ರಾಮದ ಒಂದು ಕ್ಷೇಮವನ್ನು ಮನಸ್ಸಿನಲ್ಲಿಟ್ಟು ಕೊಂಡು ಖಂಡಿತವಾಗಿ ಕೆಲಸ ಮಾಡುತ್ತಿಲ್ಲ, ಆದ್ದರಿಂದ ಸಬ್ಜೆಕ್ಟ್ ಟು ದಿ ಕಂಟ್ರೋಲ್ ಆ ಪವರನ್ನು ಸರ್ಕಾರ ತೆಗೆದುಕೊಂಡಿರುವುದು ಸರಿಯಾದುದಲ್ಲ. Every members shall be subject to the control and supervision of the Government, ಅಧಿಕಾರಿ ನಿಸ್ಪಕ್ಷಪಾತದಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ಈ ರಾಜ್ಯಕ್ಕೆ ಮತ್ತು ಗ್ರಾಮಕ್ಕೆ ಒಳ್ಳೆಯದಾಗುವುದಿಲ್ಲ. ಎಲ್ಲಿಯವರೆಗೆ ಈ ರಾಜಕೀಯ ಪಕ್ಷಗಳು ನಿಸ್ಪಕ್ಷಪಾತವಾಗಿ ಚುನಾವಣೆ ನಡೆಸುವು ದಿಲ್ಲವೋ ಅಲ್ಲಿಯವರೆಗೂ ಕೂಡ ಸರಿಯಾದ ವ್ಯವಸ್ಥೆ ಯಾಗುವುದಿಲ್ಲ. ಗ್ರಾಮ ಪಂಚಾ ಯಿತಿ ಚುನಾವಣೆಯಲ್ಲಿ ಒಳ ಪಂಗಡಗಳು ಉಂಟಾಗಿ, ಅಲ್ಲಿ ವೈಮನಸ್ಸು ಉಂಟಾಗಿ ಅನೇಕ ಸಾವು ನೋವುಗಳಾಗುತ್ತವೆ. ಬಿಹಾರ ರಾಜ್ಯದಲ್ಲಿ ಸುಮಾರು ೨೦೦ ಜನ ಸತ್ತರೆಂದು ವರದಿಯಾಗಿದೆ. ಆದರೆ ಅಲ್ಲಿಯ ಸರ್ಕಾರದವರು ಕೇವಲ ೧೦–೧೫ ಜನ ಸತ್ತಿದ್ದಾರೆಂದು ಹೇಳುತ್ತಿದ್ದಾರೆ. ಅದು ಏನಾದರೂ ಆಗಲಿ ಇದರಿಂದ ಗ್ರಾಮದ ಒಗ್ಗಟ್ಟು ನಾಶವಾಗುತ್ತದೆ. ಅಲ್ಲಿರತಕ್ಕಂಥ ಸೌಹಾರ್ದ ವಾತಾವರಣ ಹಾಳಾಗುತ್ತದೆ. ಆದ್ದರಿಂದ ಯಾವುದೇ ರಾಜಕೀಯ ಪಕ್ಷ ನಿಸ್ಪಕ್ಷಪಾತವಾಗಿ ಕೆಲಸ ಮಾಡಬೇಕಾದರೆ ಸರ್ಕಾರ ಈ ಅಧಿಕಾರವನ್ನು ತೆಗೆದುಕೊಂಡಿರತಕ್ಕಂಥಾದ್ದು ಸರಿಯಾದುದಲ್ಲ. ಅನೇಕ ಸಂದರ್ಭದಲ್ಲಿ

ತನ್ನ ಪಕ್ಷಕ್ಕೆ, ತನ್ನ ಅಧಿಕಾರವನ್ನು ಉಳಿಸಿಕೊಳ್ಳುತ್ತಾರೆ ಹೊರತು ಗ್ರಾಮದ ಕ್ಷೇಮವನ್ನು ನೋಡುವುದಿಲ್ಲ. ಈ ಉದ್ದೇಶದಿಂದ ಈ ತಂದಿರತಕ್ಕಂಥ ಮಸೂದೆ ನ್ಯಾಯವಾದುದಲ್ಲ, ಸರಿಯಾದುದಲ್ಲ ಎಂಬುದಾಗಿ ಹೇಳುತ್ತಾ ಈ ಮಸೂದೆಯನ್ನು ಖಂಡಿತವಾಗಿ ವಿರೋಧಿಸುತ್ತೇನೆ.

† ಶ್ರೀ ವಿ. ಎಲ್. ಶಿವಪ್ಪ (ತಿಪಟೂರು) — ಮಾನ್ಯ ಅಧ್ಯಕ್ಷರೇ. ಈ ದಿವಸ ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಕರ್ನಾಟಕ ವಿಲೇಜ್ ಪಂಚಾಯಿತ್ ಮತ್ತು ಲೋಕಲ್ ಬೋರ್ಡ್ಸ್ (ಅಮೆಂಡ್ ಮೆಂಟ್) ಬಿಲ್ ೧೯೭೭ ತಂದಿದ್ದಾರೆ. ಅದನ್ನು ನಾನು ಬಹಳ ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಈ ಚುನಾವಣೆಗಳ ವಿಷಯದಲ್ಲಿ ಈ ಮುಂಚೆ ಇದ್ದಂತಹ ಮಹತ್ವ ಇತ್ತೀಚೆಗೆ ಅಧಿಕಾರ ವರ್ಗದವರು ಸೇರಿಕೊಂಡು ಅದನ್ನು ಕಡಿಮೆ ಮಾಡಿದ್ದಾರೆ. ಚುನಾವಣೆ ಮಹತ್ವ ಇಲ್ಲದೆ ಹೋದ ಪಕ್ಷಕ್ಕೆ, ಅಧಿಕಾರಿಗಳಿಗೆ ಭಯ ಇಲ್ಲದೆ ಹೋದರೆ ಚುನಾವಣೆಗಳು ನ್ಯಾಯವಾದ ರೀತಿಯಲ್ಲಿ ನಡೆಯುವುದಕ್ಕೆ ಸಾಧ್ಯವಿಲ್ಲ. ಕೆಲವು ಅಧಿಕಾರಿಗಳು ಭಯ ಇಲ್ಲದೆ ವರ್ತಿಸಿದ್ದಾರೆ, ಉದಾಹರಣೆಗೆ ನಮ್ಮ ತಿಪಟೂರ್‌ನಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಚುನಾವಣೆ ನಡೆದು ಫಲಿತಾಂಶ ಹೊರಬಿದ್ದಾಗ ಒಬ್ಬ ನಿಮ್ಮ ವರ್ಗದವರು ಹೆಚ್ಚಿನ ಮತ ಬಂದಿದ್ದರೂ ಅದನ್ನು ಜನರಲ್ ಸೀಟ್ ಎಂಬುದಾಗಿ ಅನೌನ್ಸ್ ಮಾಡಿಲ್ಲ. ಮತ್ತೆ ಜನರಲ್ ಸೀಟಿನಲ್ಲಿ ಕಡಿಮೆ ಮತ ಬಂದಿದ್ದರೂ ಅದನ್ನು ಮೊದಲು ಅನೌನ್ಸ್ ಮಾಡಿದ್ದಾರೆ. ಮತ್ತೆ ಕೆಲವು ಕಡೆ ಒಟರ್ ಲಿಸ್ಟನ್ನೇ ತೆಗೆದುಕೊಂಡು ಹೋಗದೆ ಅ ಅಭ್ಯರ್ಥಿಯೂ ಕೂಡ ಓಟು ಮಾಡಿಲ್ಲ. ಆದರೆ ಸಂಜೆ ೬ ಗಂಟೆಯಲ್ಲಿ ಯಾರಾದರೂ ಓಟು ಮಾಡುವವರು ಇದ್ದಾರೆಯೆ ಎಂಬುದಾಗಿ ಕೇಳಿದರು. ನಂತರ ಎಲ್ಲರೂ ಓಟು ಮಾಡಿದ್ದಾರೆಂದು ಫಲಿತಾಂಶವನ್ನು ಅನೌನ್ಸ್ ಮಾಡಿದ್ದಾರೆ, ಇರತಕ್ಕಂಥ ನಿಜಸ್ಥಿತಿಯನ್ನು ತಿಳಿದ ನಾನು ಅಲ್ಲಿರತಕ್ಕಂಥ ಅಸಿಸ್ಟೆಂಟ್ ಕಮೀಷನರ್‌ರವರಿಗೆ ಫೋನ್ ಮಾಡಿ ಅವರಿಗೆ ಕೇವಲ ೮೮ ಒಟು ಬಂದಿದ್ದರೂ ಅದನ್ನು ೧೮೮ ಎಂಬುದಾಗಿ ಮಾಡಿ ಅನೌನ್ಸ್ ಮಾಡಿದ್ದಾರೆ, ಇದು ಹೇಗೆ ? ಎಂಬುದಾಗಿ ಕೇಳಿದ್ದಕ್ಕೆ, ನಾವು ಏನು ಮಾಡುವುದಕ್ಕಾಗುವುದಿಲ್ಲ. ಬೇಕಾದರೆ ನೀವು ಕೋರ್ಟಿಗೆ ಹೋಗಿ ಎಂಬುದಾಗಿ ಹೇಳಿದರು. ಹಳ್ಳಿಯಲ್ಲಿರತಕ್ಕಂಥ ಬಡಜನತೆ ದುಡ್ಡನ್ನು ಖರ್ಚು ಮಾಡಿ ಕೋರ್ಟಿಗೆ ಹೋಗುವುದಕ್ಕೆ ಸಾಧ್ಯವೇ ? ಆದ್ದರಿಂದ ಇಂತಹ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಚುನಾವಣೆಗೆ ಇರುವ ಮಹತ್ವ ಇನ್ನೂ ಇಲ್ಲದ ಹಾಗೆ ಆಗುತ್ತದೆಂದು ನಾನು ಹೇಳಬೇಕಾಗಿದೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಾ ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜ ನಗರ). ಮಾನ್ಯ ಅಧ್ಯಕ್ಷರೇ, ಪಂಚಾಯಿತಿ ರಾಜ್ಯ ಮಂತ್ರಿಗಳು ತಂದಿರತಕ್ಕಂಥ ಬಿಲ್ಲನ್ನು ಬಹಳ ಕಟುವಾಗಿ ವಿರೋಧಿಸುತ್ತೇನೆ. ಕಾರಣವಾದರೂ ಇಷ್ಟೆ ಈ ಬಿಲ್ಲನ್ನು ಇಂಟರ್‌ಡ್ಯೂಸ್ ಮಾಡುತ್ತಾ ಅವರು ಹೇಳಿದರು. ಇದು ಬಹಳ ಸಣ್ಣ ಬಿಲ್ಲನ್ನು ಇಂಟರ್‌ಡ್ಯೂಸ್ ಮಾಡುತ್ತಿದ್ದೇವೆ. ಇದಕ್ಕೆ ತಿದ್ದುಪಡಿ ಬಹಳ ಅವಶ್ಯಕ ಎಂಬುದಾಗಿ ಹೇಳಿದರು. ನಾನು ಮೊದಲನೆ ಪ್ರಶ್ನೆಯನ್ನು ಕೇಳಬೇಕಾಗಿದೆ. ಯಾವುದೇ ಪ್ರಜಾಪ್ರಭುತ್ವದಲ್ಲಿ ಚುನಾವಣೆಗೆ ನಾವು ಮಹತ್ವ ಕೊಡಬೇಕಾಗುತ್ತದೆ. Under the Constitution Election Commission has got its own place. ರಾಜ್ಯಾಂಗದಲ್ಲಿ ಚುನಾವಣೆಗೆ ಒಂದು ಗೌರವಯುತವಾದ ಸ್ಥಾನವನ್ನು ಕೊಟ್ಟಿದ್ದಾರೆ. ಕಾರಣ ಇಷ್ಟೆ ಅಧಿಕಾರದಲ್ಲಿರತಕ್ಕಂಥ ಯಾವುದೇ ಪಕ್ಷ ಇದನ್ನು ದುರುಪಯೋಗ ಮಾಡುವುದಕ್ಕೆ ಅವಕಾಶ ಇರುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಅಧಿಕಾರದಲ್ಲಿರತಕ್ಕಂಥವರ ಕೈಗೆ ಇದನ್ನು ಕೊಡಬಾರದು ಎಂಬುದಾಗಿ ಮಾಡಿದ್ದಾರೆ.

ಈಗ ನಮ್ಮ ರಾಜ್ಯಾಂಗದ ಪ್ರಕಾರವಾಗಿ, ಯಾವುದೇ ಸ್ಟೇಟ್ ಲೆಜಿಸ್ಲೇಚರ್‌ಗೆ ಅಥವಾ ಪಾರ್ಲಿಮೆಂಟಿಗೆ ಚುನಾವಣೆ ಮಾಡುವಂತಹ ಸಂದರ್ಭ ಬಂದಾಗ When once the process of election is started, nobody else can stop the election ; even the courts cannot issue stay orders regarding these elections. ಇದನ್ನು ಅರಿತುಕೊಂಡೇ ಹಿಂದೆ ಈ ಆಕ್ಟ್ ಮಾಡಿದವರು ಇದರಲ್ಲಿ ಎರಡು ಕ್ಲಾಸ್‌ಗಳನ್ನು ಮಾತ್ರ ಇಟ್ಟಿದ್ದಾರೆ.—

"(1) The election of members to panchayats shall be held on such date as the Deputy Commissioner may appoint in this behalf.

(2) Subject to the provisions of this Act, such election shall be conducted by ballot."

೫–೩೦ ಪಿ. ಎಂ.

ಬಹುಶಃ ಈ ಆಕ್ಟ್ ಫ್ರೇಮ್ ಮಾಡಿದ ಉದ್ದೇಶವಾದರೂ ಸಹ, ಈ ಚುನಾವಣೆಗಳು ಸರ್ಕಾರದ ಅಧಿಕಾರದ ಹಿಡಿತಕ್ಕೆ ಸಿಕ್ಕಿ ಕಸಿವಿಸಿಯಾಗಬಾರದೆಂಬ ಕಾರಣದಿಂದ. ಮಳೆಗಾಲ ಬಂದಿದ್ದರಿಂದ ಚುನಾವಣೆಯನ್ನು ಅನಿವಾರ್ಯವಾಗಿ ಮುಂದಕ್ಕೆ ಹಾಕಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಈಗಿನ ಆಕ್ಟ್ ಪ್ರಕಾರ ಯಾವ ತಾರೀಖಿನಂದು ಚುನಾವಣೆ ನಡೆಸಬೇಕೆಂಬುದರ ಬಗ್ಗೆ ಅಧಿಕಾರವನ್ನು ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದೇವೆ. ಅದರಂತೆ ಮಳೆಗಾಲ ಇಲ್ಲದ ಸಮಯದಲ್ಲಿ ಮತ್ತು ವ್ಯವಸಾಯದ ಸಮಯವನ್ನು ಬಿಟ್ಟು ಚುನಾವಣಾ ತಾರೀಖನ್ನು ನಿಗದಿ ಮಾಡುವಂತೆ ತಾವು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡಬಹುದಾಗಿತ್ತು. ಆದರೆ ತಾವು ಆ ರೀತಿ ಮಾಡಲಿಲ್ಲ. ಚುನಾವಣೆ ಮಾಡಿ ಎಂದು ತಾವು ಆದೇಶ ಕೊಟ್ಟಿರಿ ; ಅದರಂತೆ ಅವರು ತಾರೀಖನ್ನು ನಿಗದಿ ಮಾಡಿದರು. ನಂತರ ತಮಗೆ ರೆಪ್ರೆಜೆಂಟೇಷನ್ ಬಂದಿರ ಬಹುದು; ಈ ದೃಷ್ಟಿಯಿಂದ ಇದನ್ನು ತಮ್ಮ ಪಕ್ಷಕ್ಕೆ ಮತ್ತು ರಾಜಕೀಯಕ್ಕೆ ಒಳಗಾಗುವ ರೀತಿಯಲ್ಲಿ ತಿದ್ದುಪಡಿ ಮಾಡುತ್ತಿದ್ದೀರಿ. ಈ ರೀತಿ ನಡೆದುಕೊಳ್ಳಲು ಈ ಮೊದಲು ತಮಗೆ ಯಾವ ಅಧಿಕಾರವೂ ಇರಲಿಲ್ಲ. ಸರ್ಕಾರಕ್ಕೆ ಅಧಿಕಾರ ಇರಬಾರದೆಂಬ ದೃಷ್ಟಿಯಿಂದಲೇ ಈ ಮೊದಲು ಡಿ. ಸಿ. ಗಳಿಗೆ ಅಧಿಕಾರ ಕೊಡಲಾಗಿತ್ತು. ಆದರೆ ಈಗ ಈ ತಿದ್ದುಪಡಿಯನ್ನು ತಂದು ಆ ಅಧಿಕಾರವನ್ನು ತಾವೇ ತೆಗೆದುಕೊಳ್ಳುತ್ತಿದ್ದೀರಿ. ಈ ವರ್ಷವೇನೋ ಮಳೆಗಾಲ ಬಂತು ಎಂದು ಕಾರಣ ಕೊಡಬಹುದು ; ನಾಳೆ ಈ ತಿದ್ದುಪಡಿ ಪಾಸಾದ ಮೇಲೆ ತಮಗೆ ಯಾವುದೇ ಚುನಾವಣೆಯಲ್ಲಿಯೂ ಹಸ್ತಕ್ಷೇಪ ಮಾಡುವುದಕ್ಕೆ ಅಧಿಕಾರ ಸಿಗುತ್ತದೆ. ಮಾನ್ಯ ಭಿಮಣ್ಣ ಖಂಡ್ರೆಯವರು ಹೇಳಿದಂತೆ ಈಗ ಹುಲಕೋಟಿಯ ಚುನಾವಣೆಯನ್ನು ನಿಲ್ಲಿಸಿದ್ದೀರಿ. ನಾಳೆ ನಮ್ಮ ಚಾಮರಾಜನಗರದ ಚುನಾವಣೆಯನ್ನು ಸಹ ನಿಲ್ಲಿಸಬಹುದು. ಆ ಒಂದು ಅಧಿಕಾರವನ್ನು ತಾವು ಇಟ್ಟುಕೊಂಡಿದ್ದೀರಿ. ಇದರಿಂದ ಮುಂದೆ ಚುನಾವಣೆಯು ನಡೆಯುವ ಸಂದರ್ಭದಲ್ಲಿ ಸ್ಥಳೀಯವಾಗಿ ನಿಮ್ಮ ಪಕ್ಷದವರು ಸರ್ಕಾರದ ಮೇಲೆ ಒತ್ತಾಯ ತರುವುದಕ್ಕೆ ಅವಕಾಶವಿರುತ್ತದೆ. ಚುನಾವಣೆ ನಡೆದರೆ ನಮ್ಮ ಪಕ್ಷಕ್ಕೆ ಸೋಲಾಗುತ್ತದೆ, ಆದ್ದರಿಂದ ಚುನಾವಣೆಯನ್ನು ಮುಂದಕ್ಕೆ ಹಾಕಿ ಎಂದು ಅವರು ನಿಮ್ಮನ್ನು ಕೇಳಿಕೊಂಡರೆ, ಆಗ ಚುನಾವಣೆಯನ್ನು ಮುಂದಕ್ಕೆ ಹಾಕಲು ಈ ಒಂದು ಪ್ರಾವಿಜನ್ ನಿಮಗೆ ಅನುಕೂಲ ಮಾಡಿಕೊಡುತ್ತದೆ. ಇದನ್ನು ಅರಿತುಕೊಂಡೇ ಈ ಆಕ್ಟ್ ಮಾಡಿದ ಜನರು ಸರ್ಕಾರಕ್ಕೆ ಅಧಿಕಾರ ಕೊಡಬಾರದೆಂದು ಡಿ. ಸಿ. ಅವರಿಗೆ ಅಧಿಕಾರ ಕೊಟ್ಟಿದ್ದರು. ಚುನಾವಣೆ ನಿಷ್ಪಕ್ಷಪಾತವಾಗಿ ನಡೆಯಲೆಂಬ ಕಾರಣದಿಂದ ಅವರು ಈ ರೀತಿ ಆಕ್ಟ್ ಮಾಡಿದ್ದರು. ಆದರೆ ನೀವು ಈ ತಿದ್ದುಪಡಿಯ ಮೂಲಕ ರಾಜಕೀಯ ಮಾಡುತ್ತಿದ್ದೀರಿ. ಇದು ಸರಿಯಾದುದಲ್ಲ. ಮಾನ್ಯ ಮಂತ್ರಿಗಳು ಈ ಸಲ ಮಳೆಗಾಲ ಬಂತು ಎಂದು ಹೇಳಿದರು. ಮಳೆಗಾಲದಲ್ಲಿಯೇ ಏತಕ್ಕೆ ಚುನಾವಣೆ ನಡೆಸಬೇಕು ? ಮಳೆಗಾಲ ಇಲ್ಲದಿದ್ದಾಗಲೇ ಡಿ. ಸಿ. ಅವರು ತಾರೀಖನ್ನು ನಿಗದಿ ಮಾಡುತ್ತಿದ್ದರು. ಮತ್ತು ನಿಷ್ಪಕ್ಷಪಾತವಾಗಿ ಚುನಾವಣೆ ನಡೆಸುತ್ತಿದ್ದರು. ಆದರೆ ತಾವು ಇದರಲ್ಲಿ ಏತಕ್ಕೆ ರಾಜಕೀಯ ತರುತ್ತಿದ್ದೀರಿ ? ಈ ತಿದ್ದುಪಡಿಯ ಪ್ರಕಾರ ಮುಂದೆ ಪಂಚಾಯಿತಿ ಚುನಾವಣೆಯಾಗಲೀ, ತಾಲ್ಲೂಕು ಬೋರ್ಡಿನ ಚುನಾವಣೆಯಾಗಲೀ ಮತ್ತೆ ಯಾವುದೇ ಚುನಾವಣೆಯಾಗಲೀ ನಿಷ್ಪಕ್ಷಪಾತವಾಗಿ ನಡೆಯುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಚುನಾವಣೆಯಲ್ಲಿ ನಿಮ್ಮ ಪಕ್ಷಕ್ಕೆ ಬಹುಮತ ಬರುವುದಿಲ್ಲವೆಂದು ತಿಳಿದುಬಂದರೆ, ಅದನ್ನು ನಿಲ್ಲಿಸುವಂತಹ ಅಧಿಕಾರವನ್ನು ತೆಗೆದುಕೊಳ್ಳುತ್ತಿದ್ದೀರಿ. ಈ ದೃಷ್ಟಿಯಿಂದ ಈ ತಿದ್ದುಪಡಿಯನ್ನು ಪಾಸ್ ಮಾಡುವುದು ಸಾಧುವಾದುದಲ್ಲವೆಂದು ಹೇಳುತ್ತೇನೆ. ಈ ವರ್ಷ ಮಳೆಗಾಲ ಬಂತು. ಆದಕಾರಣ ಈ ತಿದ್ದುಪಡಿಯನ್ನು ಈ ವರ್ಷಕ್ಕೆ ಮಾತ್ರ ಸೀಮಿತಗೊಳಿಸಲಾಗುತ್ತದೆ ಮುಂದೆ ಇದನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲವೆಂದು ತಾವು ಎಲ್ಲಿ ಹೇಳಿದ್ದೀರಿ? Your assurance is not sufficient, that the Government will not use it for their own political ends. There should be something in the amendment itself. ಇದನ್ನು ಈ ವರ್ಷಕ್ಕೇ ಸೀಮಿತ ಎಂದು ಹೇಳಿದ್ದರೆ ನಾವು ಬಹುಶಃ ಒಪ್ಪಿಕೊಳ್ಳಬಹುದಾಗಿತ್ತು. ಆ ರೀತಿ ತಾವು ಹೇಳದಿದ್ದರೆ ನಾವು ಇದನ್ನು ಕಟುವಾಗಿ ಟೀಕೆ ಮಾಡಬೇಕಾಗುತ್ತದೆ. ಮತ್ತು ವಿರೋಧ ಮಾಡಬೇಕಾಗುತ್ತದೆ. ಇನ್ನು ಮುಂದೆ ಪಂಚಾಯಿತಿಗಳಲ್ಲಿ ಸರಿಯಾಗಿ ಚುನಾವಣೆ ನಡೆಯುವುದಕ್ಕೆ ಅವಕಾಶವಿರುವುದಿಲ್ಲ. ಸರ್ಕಾರದ ಹಸ್ತಕ್ಷೇಪದಿಂದ ಅಲ್ಲಿ ಗೊಂದಲದ ವಾತಾವರಣ ಉಂಟಾಗಬಹುದು ; ಪಂಚಾಯಿತಿ ಮಟ್ಟದಲ್ಲಿ ಈ ರೀತಿ ಹಸ್ತಕ್ಷೇಪ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ. ಮತ್ತು ಇದನ್ನು ಕಟುವಾಗಿ ವಿರೋದ ಮಾಡುತ್ತೇನೆ

†ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಮಂಡಿಸಿರ ತಕ್ಕಂಥ ಈ ತಿದ್ದುಪಡಿಯನ್ನು ವಿರೋಧಿಸಬೇಕಾಗಿದೆ. ಕಾರಣವೇನೆಂದರೆ, ಈ ಒಂದು ತಿದ್ದುಪಡಿ ಶಾಶ್ವತ ವಾಗಿ ಮೂಲಶಾಸನದಲ್ಲಿ ಒಂದು ಕಾನೂನಾಗಿ ಪರಿಣಮಿಸುತ್ತದೆ. ಯಾವುದೇ ಒಂದು ಕಾನೂನು ಮಾಡು ವಾಗ ಅದಕ್ಕೆ ಕಾರಣ ಕೊಡುವುದು ಒಂದು ನ್ಯಾಯಬದ್ಧವಾದ ಮತ್ತು ಒಂದು ಶಾಸ್ತ್ರೀಯವಾದ ಒಂದು ಪದ್ಧತಿ ಕಾರಣವಿಲ್ಲದೆ ಯಾವುದೇ ಕಾರ್ಯ ನಡೆಯಲಾರದು. ಆದರೆ ಇವೊತ್ತು ಒಂದು ಮೂಲ ಶಾಸನಕ್ಕೆ ಒಂದು ತಿದ್ದುಪಡಿ ತರುವಂತಹ ಸಂಧರ್ಭದಲ್ಲಿ, ಅದು ನಿರ್ಧಿಷ್ಟವಾದಂಥ ಶಾಸನವಾಗಿ ಪರಿಣಮಿಸುವಂತಹ ಕಾಲದಲ್ಲಿ, ತಾವು ಕೊಟ್ಟಿರುವ ಕಾರಣ ಅಸಮರ್ಪಕವಾಗಿ, ಅಸಮಂಜಸವಾಗಿದೆ ಮತ್ತು ಅಸಂಬದ್ಧವಾಗಿದೆ. ಈ ಬಗ್ಗೆ ಆರ್ಡಿನೆನ್ಸ್ ತರುವುದಕ್ಕೆ ಕಾರಣವಿತ್ತು. ಆದರೆ ಈ ಒಂದು ತಿದ್ದು ಪಡಿ ತರುವುದಕ್ಕೆ ಏನು ಕಾರಣವಿತ್ತು ಎಂಬ ಬಗ್ಗೆ ಆಬ್ಜೆಕ್ಟ್ ಅಂಡ್ ರೀಜನ್ಸ್‌ನಲ್ಲಿ ಎಲ್ಲಿಯೂ ಹೇಳಿಲ್ಲ. ಇವರು ತಂದಿರುವ ತಿದ್ದುಪಡಿಗೂ ಮತ್ತು ಮಾನ್ಯ ಮಂತ್ರಿಗಳು ಕೊಟ್ಟ ಕಾರಣಕ್ಕೂ ಹೊಂದಾಣಿಕೆ ಬರುತ್ತಿಲ್ಲ, ಆದಕಾರಣ ಇದನ್ನು ತರುವ ಹಕ್ಕು ಇವರಿಗಿಲ್ಲ ಮತ್ತು ಇದು ನ್ಯಾಯಬದ್ಧವಾಗಿಲ್ಲವೆಂಬು ದನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಕಾರ್ಯಾಂಗವು ಸಂಪೂರ್ಣವಾಗಿ ಶಾಸಕಾಂಗಕ್ಕೆ ಅಧೀನ, ಶಾಸಕಾಂಗ ಜನತೆಗೆ ಅಧೀನ. ಆದಕಾರಣ ಇಲ್ಲಿ ಜನಾಂಗದ ವಿಷಯವನ್ನು ನಾನು ಹೇಳುವುದಿಲ್ಲ. ನಾವು ಯಾವುದೇ ಒಂದು ಕಾರ್ಯ ಮಾಡಬೇಕಾದರೆ ಅದಕ್ಕೆ ಏನಾದರು ಒಂದು ನಿರ್ಧಿಷ್ಟ ಕಾರಣವಿರಬೇಕು. ಇಲ್ಲಿ ತಾವು ಚುನಾವಣೆಯನ್ನು ಮುಂದಕ್ಕೆ ಹಾಕಬಹುದು ಎನ್ನುವಷ್ಟು ಅಧಿಕಾರವನ್ನು ಇಟ್ಟುಕೊಳ್ಳುತ್ತೀರಿ. ಏಕೆ ಚುನಾವಣೆಯನ್ನು ಮುಂದಕ್ಕೆ ಹಾಕುತ್ತೀರಿ ಎಂದು ಕೇಳಿದರೆ, ಮಳೆ ಎಂದು ಕಾರಣ ಕೊಡಬಹುದು, ನಾಳೆ ನಿಮ್ಮ ಎಂ ಎಲ್. ಎ. ಒಬ್ಬರು ಹೀಗದ ಬರೆದರೂ ಸಹ ಮುಂದಕ್ಕೆ ಹಾಕುತ್ತೀರಿ. ಆದರೆ ಮೂಲ ಶಾಸನದಲ್ಲಿ ಇದನ್ನು ತಾವು ಹೇಳಿಲ್ಲ. ತಾವು ಈಗ ಕೊಟ್ಟಕಾರಣಕ್ಕೂ ಮತ್ತು ತಮ್ಮ ಕಾರ್ಯಕ್ಕೂ ಸಂಬಂಧವಿಲ್ಲದಿರುವ ತಿದ್ದುಪಡಿಯನ್ನು ತಂದಿದ್ದೀರಿ ಈ ಒಂದು ಶಾಸನ ಮಾಡತಕ್ಕಂಥ, ಇಲಾಖೆ ಏನಿದೆ, ಅದು ಇದನ್ನು ಸರಿಯಾಗಿ ಪರ್ಯಾಲೋಚನೆ ಮಾಡಿಲ್ಲವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಆದ್ದರಿಂದ ಈ ತಿದ್ದುಪಡಿ ಇಲ್ಲಿ ಮಂಡನೆಗೆ ಅನರ್ಹವಾಗಿದೆ ಎಂದು ಹೇಳುತ್ತೇನೆ. ಈ ಒಂದು ಕೆಲಸ ಮಾಡುವಾಗ ನಿರ್ಧಿಷ್ಟವಾದ ಕಾರಣಗಳನ್ನು ಕೊಡಬೇಕಾಗಿತ್ತು. ಒಂದುವೇಳೆ ಸರ್ಕಾರ ತನಗೆ ಸಿಕ್ಕಿದಂಥ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಾಗ ಅಂದರೆ ತನ್ನ ಸ್ವಾರ್ಥಕ್ಕಾಗಿ ಯಾರಿಗಾದರೂ ಅನುಕೂಲ ಮಾಡಿ ಕೊಡಬೇಕೆಂಬ ಉದ್ದೇಶದಿಂದ ಚುನಾವಣೆಯನ್ನು ಮುಂದಕ್ಕೆ ಹಾಕಿದರೆ, ಅದರಿಂದ ಬೇರೆಯವರಿಗೆ ತೊಂದರೆಯಾದಾಗ, ಅವರು ನ್ಯಾಯಾಲಯಕ್ಕೆ ಹೋಗಿ ಪ್ರಶ್ನೆ ಮಾಡುವುದಕ್ಕೆ ಅವಶ್ಯಕವಾದಂಥ ಕಾರಣ ಇಲ್ಲಿ ಇರಬೇಕಾಗಿತ್ತು. ಆದರೆ ಆ ಕಾರಣ ಇಲ್ಲಿ ಇಲ್ಲ. ಚುನಾವಣೆಯನ್ನು ಮುಂದಕ್ಕೆ ಹಾಕಬಹುದು: ಆದರೆ ಏಕೆ ಹಾಕುತ್ತೀರಿ ಎಂಬುದಕ್ಕೆ ಮೂಲ ಶಾಸನದಲ್ಲಿ ಕಾರಣವಿಲ್ಲ. ಈ ರೀತಿ ಕಾರಣವಿಲ್ಲದ ಕೆಲಸವನ್ನು ಶಾಸಕಾಂಗದಿಂದ ಕಾರ್ಯಾಂಗಕ್ಕೆ ವಹಿಸಿಕೊಡುವುದು ಪ್ರಜಾಪ್ರಭುತ್ವದ ದೃಷ್ಟಿಯಿಂದ ಒಳ್ಳೆಯದಲ್ಲ ವೆಂದು ಹೇಳುತ್ತೇನೆ. ಇಲ್ಲಿ ಚುನಾವಣೆಯನ್ನು ಮುಂದಕ್ಕೆ ಹಾಕುವುದು ಎಂದರೆ, ಇಡೀ ರಾಜ್ಯದ ಚುನಾವಣೆಯನ್ನೇ, ಒಬ್ಬರು ಸದಸ್ಯರ ಚುನಾವಣೆಯನ್ನೇ ಅಥವಾ ಒಂದು ಕ್ಷೇತ್ರದ ಚುನಾವಣೆಯನ್ನೇ ಎಂಬುದನ್ನು ಇಲ್ಲಿ ಹೇಳಿಲ್ಲ. ಈ ಕಾರಣದಿಂದ ಮಂತ್ರಿಗಳು ತಮಗಿಚ್ಛೆ ಬಂದಂತೆ ಮುಂದಕ್ಕೆ ಹಾಕ ಬಹುದು. ಕಾರಣ ಕೊಡದೆ ಮುಂದಕ್ಕೆ ಹಾಕಬಹುದೇ ಎಂಬ ಅಂಶ ಇಲ್ಲಿ ಸ್ಪಷ್ಟವಾಗಿಲ್ಲ. ಇಲ್ಲಿ ಮಂತ್ರಿಗಳ ಒಂದು ಸ್ವೇಚ್ಛಪ್ರವೃತ್ತಿಗೆ, ಅವರ ಒಂದು ಸ್ವಾಭಿಮಾನಕ್ಕೆ ಅನುಗುಣವಾಗಿ, ಯಾರೇ ಒಬ್ಬ ವ್ಯಕ್ತಿಗೆ ಇಲ್ಲವೇ ಒಂದು ಕ್ಷೇತ್ರಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂಗ ಚುನಾವಣೆಯನ್ನು ಮುಂದಕ್ಕೆ ಹಾಕುವಂತಹ ಒಂದು ಅವಕಾಶವನ್ನು ಮಾಡಿಕೊಡುವಂತಹ ಒಂದು ಶಾಸನವನ್ನು ಮಾಡುವುದು ಯಾವುದೇ ಶಾಸನಸಭೆಗೆ ಯುಕ್ತವಾದುದಲ್ಲ, ಯೋಗ್ಯವಾದುದಲ್ಲ, ಇದರಿಂದ ಶಾಸನಸಭೆಯ ಗೌರವಕ್ಕೆ ಚ್ಯುತಿ ಬರುತ್ತದೆಂದು ಅನಿವಾರ್ಯವಾಗಿ ಹೇಳಬೇಕಾಗಿದೆ. ಒಂದುವೇಳೆ ಮುಂದಕ್ಕೆ ಹಾಕುವ ಅವಕಾಶ ಕೊಟ್ಟರೆ ಯಾವ ಕಾರಣಕ್ಕೆ, ಯಾವ ಸಮಯದಲ್ಲಿ ಹಾಕಬೇಕು ಎಂಬುದನ್ನು ಇಲ್ಲಿ ತಿಳಿಸಬೇಕಾಗುತ್ತದೆ. ಅದರ ಜೊತೆಗೆ ಮುಂದಕ್ಕೆ ಹಾಕುವವರು ಮಂತ್ರಿಗಳೋ ಅಥವಾ ಸರ್ಕಾರವೇ ಎಂಬುದನ್ನು ಇಲ್ಲ ತಿಳಿಸಬೇಕಾಗುತ್ತದೆ. ಈ ರೀತಿ ತಿಳಿಸುವುದರ ಜೊತೆಗೆ, ಆ ಕಾರಣಗಳನ್ನು ಬಿಟ್ಟು ಚುನಾವಣೆಯನ್ನು ಮುಂದಕ್ಕೆ ಹಾಕಿದಾಗ, ಆ ಕ್ಷೇತ್ರದ ಮತದಾರರು ಅದು ತಪ್ಪು ಎಂದು ತೋರಿಸಿಕೊಡುವುದಕ್ಕೆ ಅವರಿಗೆ ಅಧಿಕಾರವಿದೆಯೋ ಎಂಬುದು ಇದರಲ್ಲಿ ವ್ಯಕ್ತವಾಗಿಲ್ಲ. ಈ ಕಾರಣದಿಂದ ಇದು ಅಸಮರ್ಪಕವಾಗಿದೆ, ಅಸಮಂಜಸವಾಗಿದೆ ಎಂದು ಹೇಳಬಹುದು. ಈ ತಿದ್ದುಪಡಿ ಕೇವಲ ಕಳೆದ ವರ್ಷಕ್ಕೆ ಅನ್ವಯವಾಗು

ವಂತಿದ್ದರೆ ಒಪ್ಪಬಹುದಾಗಿತ್ತು. ಆದರೆ ಇದು ಶಾಶ್ವತವಾದಂಥ ತಿದ್ದುಪಡಿಯಾಗುವ ರೀತಿಯಲ್ಲಿ ತಂದಿರುವುದು ಸರಿಯಾದುದಲ್ಲವೆನ್ನುವ ಕಾರಣಕ್ಕಾಗಿ ಈ ತಿದ್ದುಪಡಿಯನ್ನು ನಾನು ವಿರೋಧ ಮಾಡುತ್ತೇನೆ.

† SRI L. LAKSHMI SAGAR (Chickpet).—Mr. Speaker Sir, in the statement of objects and reasons it is stated that it was considered necessary to provide for cancellation and modification of the calendar of events or postponement of the poll by issuing directions by the Government on the lines similar to the provisions in the Karnataka Municipalities Act 1964. The intention behind this amending clause is that under the main Act, under Sec. 7 when once the calendar of events are published by the Dy. Commissioner. there is no power for the Dy. Commissioner or the Governmrnt either to postpone or cancel the election. This situation landed them in trouble, because of unfavourable seasonal conditions which may perhaps come in the way of holding election. This is a small area of difficulty which made the Govt. to bring forward this small piece of amendment. If the proposed amendment is concerned to meet or remedy the situation like this, I would have had no difficulty in accepting this and given my consent for passing of this amending clause. You will kindly appreciate me - I wish the Hon. Minister will kindly read the same clause that he has now moved for the consideration of the House. I want him to read the clause, which says "Every election of Members shall be subject to the control and supervision of the Government, and it shall be lawful for the Government to issue directions regarding all matters connected with the election i cluding directions for concellation or modification of calendar of events or postponement of the poll." This is a clause by a cursory reading of it gives un-controlled powers to the Government to set at naught any election at any stage of the election. That is not what you wanted us to do I belive. That is what you have stated in the statement of objects and reasons. I want you to consider this aspect of the matter. If your intention was to incorporate what you have stated in the statement of objects and reasons, then the entire proposed clause would not be necessary. It goes to show what you wanted us to do in the statement of objects and reasons. It gives you all the powers if this is accepted and passed There is nothing which prevents you to do so and you can cancel any election according to it. That is what you have stated in the statement of objects and reasons. All that you say is that there is no provision in the original Act for modificafion of calendar of events or postponement of calendar of events when once announced.

SRI S. M. SHEERNALI CHANDRASHEKAR.—Kindly go through the original clause.

SRI L. LAKSHMI SAGAR.—I will read. It says that the election of Members to the Panchayat shall be held on such a date as the Dy. Commissioner may appoint in the calendar of events. Subject to the provisions of the Act such election shall be conducted by ballot in the prescribed manner.

Once the calendar of events is announced, there is no provision in the Act empowering the Dy. Commissioner either to cancel or postpone it. It is only the amendment which gives somuch powers. Every election of the Members shall be subject to the control and supervision of the Government. What is the import of this first portion ? You can set at naught any election. Please go through this and see. According to me if you wanted to incorporate a principle which you yourself have stated in the statement of objects and reasons appended to the Bill, only somuch of the present clause would be sufficient, the Government shall have the powers to issue directions for cancellation or modification of the calendar of events or postponement of the Poll; That would be sufficient That would meet with the requirements which you yourself have stated in the statement of objects and reasons. But the clause as is now sought to be moved to be approved and passed by the House, gives more powers than you wanted us to give according to the statement of objects and reasons. It kills the very process of election. *i.e.* the democratic process. You may cancel, and you may do whatever you like. Therefore, please see the proposed clause, in which you want us to approve this in view of your experience. This is a serious matter. I want the Hon. Minister to consider this aspect of the matter.

† ಶ್ರೀ ಕೆ. ಪ್ರಭಾಕರ್.—(ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಶಾಖೆಗಳ ಮಂತ್ರಿಗಳು) ಮಾನ್ಯ ಸಭಾಪತಿಗಳೆ, ಈ ಬಿಲ್ಲಿನ ಮೇಲೆ ಎಂಟು ಜನ ಸದಸ್ಯರು ಮಾತನಾಡಿದ್ದಾರೆ, ಎಲ್ಲರೂ ಮಾತನಾಡಿದ್ದರಲ್ಲಿ ಏಕಾಭಿಪ್ರಾಯ ಇರತಕ್ಕಂಥದ್ದು ಒಂದೇ ಒಂದು. ಸರ್ಕಾರಕ್ಕೆ ಚುನಾವಣೆಗಳ ಮೇಲೆ ಅಧಿಕಾರವಿರಲಿಲ್ಲ. ಈಗ ಅಧಿಕಾರ ತೆಗೆದುಕೊಳ್ಳತಕ್ಕಂಥ ಪ್ರಮೇಯ ಏರಲಿಲ್ಲವೆಂದು. ಈ ಅಧಿಕಾರವನ್ನು ಸರ್ಕಾರಕ್ಕೆ ನಾವು ಕೊಟ್ಟರೆ ಸಮಯೋಚಿತವಾಗಿ ಈ ಅಧಿಕಾರ ದುರವಿನಿಯೋಗವಾಗುವ ಸಂದರ್ಭವಿದೆಯೆನ್ನುವ ಶಂಕೆಯನ್ನು ಕೆಲವು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಇನ್ನು ಕೆಲವು ಸದಸ್ಯರು ಏಕೈಕವಾಗಿ ಇದರ ಬಗ್ಗೆ ಮೆಚ್ಚುತ್ತಾ ಬಂದಿದ್ದಾರೆ. ಇದು ಸಮಯೋಚಿತವಾಗಿ ಉಪಯೋಗವಾಗುವ ರೀತಿ ಸದುದ್ದೇಶದ್ದೆ ಎನ್ನುವ ಬಗ್ಗೆ ಮತ್ತು ಯಾವ ಸಂದರ್ಭದಲ್ಲಿ ಈ ಆರ್ಡಿನೆನ್ಸ್ ತರಬೇಕಾಗಿತ್ತು ಎನ್ನುವ ಬಗ್ಗೆ ಹಾಗೂ ಒಂದು ರಾಜಕೀಯ ನಾಟಕದಿಂದ ತಂದಿದ್ದಾರೆಂದು ಮಾನ್ಯ ಸದಸ್ಯರೊಬ್ಬರು ತಿಳಿಸಿದ್ದಾರೆ. ಇಡೀ ದೇಶದ ಆಡಳಿತ ಸೂತ್ರವನ್ನು ಹಿಡಿದಿರತಕ್ಕ ಸರ್ಕಾರ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳನ್ನು ನಡೆಸಿಕೊಂಡು ಬರುವ ವೈಖರಿಗೆ ಬೇರೆ ಏನೋ ಒಂದು ರೀತಿಯ ನೆಪವನ್ನು ಕೊಟ್ಟು ಚುನಾವಣೆಯ ಮಹತ್ವವನ್ನು ಕಳೆದು, ಈ ರೀತಿ ಬಿಲ್ಲಿನ ಮುಖಾಂತರ ಎಲ್ಲಾ ಅಧಿಕಾರವನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ ಎನ್ನುವ ಒಂದು ಶಂಕೆಯನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ನನ್ನ ಅನುಭವದಿಂದ ತಿಳಿದಿರತಕ್ಕಂಥದ್ದು ನನ್ನ ಗೆಳೆಯರಾದ ಶ್ರೀಮಾನ್ ಶೀರನಾಳಿ ಚಂದ್ರಶೇಖರ್ ಅವರು ಹೇಳಿದಂತೆ ಈ ವರ್ಷ ಚುನಾವಣೆಗಳು ಒಂದರ ಮೇಲೊಂದು ಬಂದವು. ಹಿಂದೆ ಪಂಚಾಯತಿ ಹಾಗೂ ತಾಲ್ಲೂಕು ಬೋರ್ಡುಗಳಿಗೆ ಚುನಾವಣೆಗಳನ್ನು ಸುಮಾರು ೭-೮ ವರ್ಷಗಳಿಂದ ಮುಂದೆ ಹಾಕಿಕೊಂಡು ಬಂದದ್ದಾಯಿತು. ಈ ಸಭೆಯಲ್ಲಿ ಅನೇಕ ಸಾರಿ ಕೊಟ್ಟಂತಹ ಮಾತನ್ನು ಜ್ಞಾಪಕ

ದಲ್ಲಿಟ್ಟುಕೊಂಡು ಅವುಗಳಿಗೆ ಚುನಾವಣೆಗಳನ್ನು ನಡೆಸಬೇಕು ಎಂದು ನಡೆಸಿದ್ದೇವೆ. ಪಂಚಾಯಿತಿ ಚುನಾವಣೆಗಳಿಗೆ ನಾಮಪತ್ರ ಹಾಕತಕ್ಕ ಅರ್ಜಿಗಳು ಸರಿಯಾಗಿ ಇವೆಯೋ ತಪ್ಪು ಇದೆಯೋ ನೋಡತಕ್ಕ ಜವಾಬ್ದಾರಿ ಶಾಸನ ಸಭಾ ಸದಸ್ಯರ ಕಾರ್ಯವಾಗಿತ್ತು. ರಾಜಕೀಯ ಪಕ್ಷಗಳು ಯಾವುದೇ ಇರಲಿ ಎಲ್ಲರೂ ಕೂಡ ಆ ಕಾರ್ಯವನ್ನು ಮಾಡಬೇಕಾಗಿತ್ತು. ಈ ಕಾರಣದಿಂದ ಇಕ್ಕಟ್ಟಿನ ಪರಿಸ್ಥಿತಿ ಕಂಡಾಗ ಒಂದೊಂದು ಆದ ಮೇಲೆ ಒಂದು ಓವರ್‌ಲ್ಯಾಪಿಂಗ್ ಎಂದು ಹೇಳಿ ಅದನ್ನು ಕಂಡಾಗ ಚುನಾವಣೆ ಮುಂದಕ್ಕೆ ಹಾಕಬೇಕು ಎಂಬ ಪರಿಸ್ಥಿತಿ ನಮಗೆ ದರ್‌ದಾಗಿ ಬಂದಿದೆ. ಆಗ ಅಡ್ಡಿ ಇತ್ತು ಎಂದು ಆಮೇಲೆ ಚುನಾವಣೆಗಳನ್ನು ನಡೆಸಬೇಕು ಎಂದು ಜಿಲ್ಲಾಧಿಕಾರಿಗಳು ಒಂದು ತಾರೀಖನ್ನು ಗೊತ್ತು ಮಾಡಿದರು; ಅದಕ್ಕನುಸಾರವಾಗಿ ಒಪ್ಪಿಕೊಳ್ಳತಕ್ಕ ಪರಿಸ್ಥಿತಿ ಇತ್ತು. ಈ ತೊಡಕನ್ನು ತಪ್ಪಿಸುವುದ ಕ್ಕೋಸ್ಕರವಾಗಿ ನಾವು ಮೇ ತಿಂಗಳಿನಿಂದ ಜೂನ್ ೩೦ ರ ವರೆಗೆ ಮುಂದಕ್ಕೆ ಹಾಕಬೇಕಾಗಿ ಬಂತು. ಮಳೆ ಅನ್ನುವ ಮಾತಿಗೋಸ್ಕರ ಹೇಳಿದ್ದು ಅಲ್ಲ. ಮಳೆ ದೆಸೆಯಿಂದ ಆಗತಕ್ಕದನ್ನು ಕುರಿತು ಹೇಳಿದ್ದು. ಜುಲೈ ತಿಂಗಳ ಮೊದಲ ಮತ್ತು ಎರಡನೇ ವಾರದಲ್ಲಿ ವಿಪುಲವಾದ ಮಳೆ ಇರುತ್ತದೆ ಎಂದು ಹೇಳಿದ್ದರ ಮೇಲೆ, ನಮ್ಮ ಅಧಿಕಾರಿಗಳು ಚುನಾವಣೆ ನಡೆಸಿದ ಅನುಭವದ ಮೇಲೆ ಜೂನ್ ತಿಂಗಳಿನಿಂದ ಜುಲೈ ೮ ನೇ ತಾರೀಖಿನವರೆಗೆ ಇರಲಿ ಎಂದು ಮುಂದುವರೆಸಿರುವುದು ನಿಜ. ಈ ದೆಸೆಯಿಂದ ಚುನಾವಣೆ ಮುಂದಕ್ಕೆ ಹಾಕಬೇಕಾಗಿ ಬಂದಿದೆ. ರಾಜಕೀಯವನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಚುನಾವಣೆ ನಡೆಸತಕ್ಕದ್ದು ಒಂದು ರೂಪದಲ್ಲಿ ಗೌರವಯುತವಲ್ಲ, ಪ್ರಜಾಪ್ರಭುತ್ವ ಶಕ್ತಿಗೆ ನೈಜವಾಗಿ ತೋರಿಸ ತಕ್ಕದ್ದಲ್ಲ ಎಂದು ಹೇಳುತ್ತೇನೆ. ಒಂದೊಂದು ಸಾರಿ ಉಪಾಯಕ್ಕೆ ಸಿಕ್ಕಿದಾಗ ಈ ರೀತಿ ಮಾಡುತ್ತಿರಾ ಎಂದು ಮಾನ್ಯ ಸದಸ್ಯರು ತಿಳಿಸಿದರು. ಅದು ಅಕ್ಷರಶಃ ಸತ್ಯಕ್ಕೆ ದೂರವಾದುದು. ಈಗ ಚುನಾವಣೆ ಗಳನ್ನು ನಡೆಸಿದ ಅನುಭವ ಇಟ್ಟುಕೊಂಡರೆ ಆರು ಸಾವಿರ ಪಂಚಾಯಿತಿಗಳಲ್ಲಿ ಚುನಾವಣೆ ನಡೆದಿದೆ. ಅವು ಗಳಲ್ಲಿ ಮೂರು ಮುಕ್ಕಾಲು ಸಾವಿರ ಇರತಕ್ಕ ಗ್ರಾಮ ಪಂಚಾಯಿತಿಗಳು ನಮ್ಮ ಪಕ್ಷದ ಕಡೆಗೆ, ಇನ್ನು ಎರಡು ಸಾವಿರ ಚಿಲ್ಲರೆ ಈ ಪಕ್ಷಗಳು ಅಲ್ಲ ಅನ್ನುವ ಕಡೆಗೆ ಎನ್ನುವುದನ್ನು ಸದಸ್ಯರ ವಾಣಿಯಿಂದ ತಿಳಿಸು ತ್ತಾರೆ. ನಮ್ಮಲ್ಲಿ ಇಂತಂತಹವರು ಇಂತಂತಹ ಪಕ್ಷದವರು ಎಂದು ನಾವು ಹಾಕಿರಲಿಲ್ಲ. ಚುನಾವಣೆ ಯಲ್ಲಿ ಗೊಂದಲವಾಗುತ್ತದೆ ಎಂದು ಈ ರೀತಿ ಮಾಡಿದ್ದೆವು. ಮಾನ್ಯ ಶಿವಣ್ಣನವರು ಹೇಳುತ್ತಾ ಪಕ್ಷದ ರಾಜಕೀಯ ಕೊಂಚ ದಿನ ನಮ್ಮ ದೇಶಕ್ಕೆ ಒಳ್ಳೆಯದನ್ನು ಮಾಡುವುದಿಲ್ಲ ಅದು ಗೊಂದಲ ಎಬ್ಬಿಸು ತ್ತದೆ ಎಂದು ಹೇಳಿದರು. ಸರ್ವೋದಯ ಪಕ್ಷದ ಅಭಿಪ್ರಾಯ ಮತ್ತು ನೀತಿಯಲ್ಲಿ ಚುನಾವಣೆ ಪದ್ಧತಿ ಬೇಡ, ಏಕೈಕವಾಗಿ ಒಂದು ಪ್ರೇಮದಿಂದ ರಾಜ್ಯಭಾರ ನಡೆಯಲಿ ಎಂದು ಅವರು ನಂಬಿರತಕ್ಕ ಮಾರ್ಗ. ಪ್ರಜೆಗಳ ಯೋಗಕ್ಷೇಮವನ್ನು ಮರೆತು ಅವರನ್ನು ತುಳಿಯುವುದು ರಾಜಕೀಯ ಸ್ವರೂಪವಲ್ಲ. ಚುನಾವಣೆಗಳನ್ನು ಅನಾವಶ್ಯಕವಾಗಿ ರಾಜಕೀಯ ನಾಟಕದಿಂದ ಮುಂದೆ ಹಾಕಿದ್ದಾರೆ ಎಂದು ಹೇಳುವ ಮಾತನ್ನು ಒಪ್ಪತಕ್ಕದ್ದಲ್ಲ. ಗ್ರಾಮಪಂಚಾಯಿತಿಗಳಿಗೆ ಅಭ್ಯರ್ಥಿಗಳನ್ನು ರಾಜಕೀಯ ಪಕ್ಷದ ಪತಿಯಿಂದ ನಿಲ್ಲಿಸಕೂಡದು ಎಂದು ಒಪ್ಪಿಕೊಂಡದ್ದು ಆಯಿತು. ಎಲ್ಲರೂ ಕೂಡ ಆ ಮಾರ್ಗವನ್ನು ಅನುಸರಿಸಿದರು. ಪಂಚಾಯಿತಿ ಚುನಾವಣೆಯಲ್ಲಿ ಯಾರು ಯಾರಿಗೆ ಯಾವ ಯಾವ ಗುರುತು ಕೊಟ್ಟರೆ ಸರಿ ಎನ್ನುವ ಬಗ್ಗೆ ಕೋರ್ಟಿಗೆ ಹೋಗಿದ್ದರು. ಯಾರು ಯಾರು ಯಾವ ಯಾವ ಚಿಹ್ನೆ ಇಟ್ಟುಕೊಂಡು ಗೆಲ್ಲಬೇಕು ಎಂದು ಗೊಂದಲ ಬಂತು. ಇದನ್ನು ಸರ್ಕಾರದವರು ಹೇಳಬೇಕೋ, ಕೋರ್ಟ್‌ನವರು ಹೇಳಬೇಕೋ ಎಂದು ವಿಚಿತ್ರ ಸಂಗತಿ ಬಂದಾಗ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಯಾರು ಯಾವ ಗುರುತಿನ ಮೇಲೆ ಗೆದ್ದರು ದೇಶಕ್ಕಾಗಿ ಒಳ್ಳೆಯ ಕೆಲಸ ಮಾಡಿದರೆ ಸಾಕು ಎಂದು ಲೀಲಾಜಾಲವಾಗಿ ಬಿಟ್ಟು ಬಿಟ್ಟೋ, ಇವೊತ್ತು ನಾವು ಗ್ರಾಮಾಂತರ ಪ್ರದೇಶಗಳಿಗೆ ಹೋದರೆ ನಮ್ಮ ಕಡೆಯವರು ಇಷ್ಟು ಜನರು ಬಂದಿದ್ದಾರೆ. ಅಧ್ಯಕ್ಷ ರನ್ನು ಚುನಾಯಿಸಬೇಕಾದರೆ ಇನ್ನು ಒಂದು ಸಾಲದು ಬರುತ್ತದೆಂದು ಹೇಳುತ್ತಾರೆ. ಮತ್ತೊಂದು ಕಡೆಯವರು ನಮಗೂ ಕೂಡ ಇನ್ನೊಂದು ಸಾಲದು ಬಂದಿದೆ ಎಂದು ಅರ್ಜಿ ಬರೆಯುತ್ತಾರೆ. ಇದಕ್ಕೆ ನಾವು ಸಹಾಯ ಮಾಡುವುದಿಲ್ಲ, ಕಾನೂನು ಹೇಗೆ ಇದೆ ಹಾಗೆ ಬರಲಿ ಅನಾವಶ್ಯಕವಾಗಿ ಅವನಿಗೆ ಆಸೆ ತೋರಿಸಿ ಪ್ರಾಣ ಭಯ ತೋರಿಸಿ ನಮ್ಮ ಕಡೆ ಎಳೆದುಕೊಂಡು ಅದರಿಂದ ಬರತಕ್ಕ ಅಧಿಕಾರ ಸರಿ ಇಲ್ಲ ಎಂದು ಹೇಳಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿ ಹೇಳುವುದು ಒಂದು ಅಲ್ಲಿ ಮಾಡುವುದು ಒಂದು.

ಶ್ರೀ ಕೆ. ಪ್ರಭಾಕರ್.—ಎಲ್ಲಿಯೂ ಕೂಡ ಇದಕ್ಕೆ ತದ್ವಿರುದ್ಧವಾಗಿ ಮಾಡಿದ್ದು ಜ್ಞಾಪಕ ಇಲ್ಲ. ಯಾರು ಎಲ್ಲಿ ಏನು ಮಾಡುತ್ತಾರೆ ಎಂದು ಹೇಳುವುದಕ್ಕೆ ನಾವು ಜವಾಬ್ದಾರರಲ್ಲ. ಇನ್ನು ಹುಲ್ಕೋಟೆ ಯಲ್ಲಿ ಮಳೆ ಬಂದಿದೆಯೋ ಎಂದು ಕೇಳುವುದಾದರೆ, ಅಲ್ಲಿ ತಾಲ್ಲೋಕು ಬೋರ್ಡ್ ಚುನಾವಣೆ ನಡೆಯು

ವಾಗ ಮುಷ್ಟಾಮುಷ್ಟಿ ಹೊಡೆದಾಟವಾಗಿ ಶಾಂತಿಭಂಗವಾಗಿ ಪೋಲೀಸ್ ಕಡೆ ಹೋಗಿದ್ದಾರೆ. ಈ ದೃಷ್ಟಿಯಿಂದ ಇಲ್ಲಿ ಶಾಂತಿ ರೀತಿಯಿಂದ ಚುನಾವಣೆಗಳು ನಡೆಯಬೇಕು, ಜನರಲ್ಲಿ ಸಹೋದರರ ಭಾವನೆ ಬೆಳೆಯಬೇಕು, ಅಲ್ಲಿ ಜನರು ಹೆಚ್ಚು ಗುದ್ದಾಟಕ್ಕೆ ಹೋಗಬಾರದು ಎಂದು ಮುಂದಕ್ಕೆ ಹಾಕಿದ್ದು ಆಯಿತು. ಅಲ್ಲಿ ಪೋಲೀಸರ ಕಡೆ ವ್ಯವಹಾರಗಳ ಕೇಸ್ ಇದೆ ಎಂದು ಹೇಳುತ್ತೇನೆ. ಇನ್ನು ಜಿಲ್ಲೆಗಳಿಗೆ ಹಣ ಹಂಚುವುದರಲ್ಲಿ ಯಾರು ಎಂ.ಎಲ್.ಎ. ಗಳು ಇದ್ದಾರೆ ಎಂದು ನೋಡಿಕೊಂಡು ಹಂಚುತ್ತಾರೆ ಎಂದು ತಾವು ಹೇಳುವುದಾದರೆ ಈ ತರಹ ಹಂಚಿಕೆ ರಾಜಕೀಯದಲ್ಲಿ ಒಂದು ಹೀನಕೃತ್ಯ ಎಂದು ಭಾವಿಸುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರು ಆ ರೀತಿ ತಿಳಿದುಕೊಳ್ಳಬಾರದು. ಇವೊತ್ತು ಯಾರೇ ಇರಲಿ ಒಂದೊಂದು ಸಾರಿ ಸ್ಪೆಷಲ್ ಗ್ರಾಂಟ್ ಕೇಳುತ್ತಾರೆ. ಬೆಂಕಿ ಬೀಳುತ್ತದೆ, ಕ್ಷಾಮ ಬರುತ್ತದೆ, ಅನಾವೃಷ್ಟಿಯಾಗುತ್ತದೆ, ಇಂತಹ ಸಂದರ್ಭದಲ್ಲಿ ಕೊಡುತ್ತಾರೆ ಎಂದು ಯೋಚನೆ ಮಾಡಬೇಕಲ್ಲದೆ, ಅವರಿಗೆ ಬೇಕಾದವರಿಗೆ ಕೊಡುತ್ತಾರೆ ಎಂದು ಯೋಚನೆ ಮಾಡಬಾರದು. ಜನರಲ್ ಅಡ್ಮಿನಿಸ್ಟ್ರೇಷನ್, ಸ್ಟಾಂಡರ್ಡ್ ಆಫ್ ಅಡ್ಮಿನಿಸ್ಟ್ರೇಷನ್ ಶುಡ್ ಫ್ಲೋ ಅನಫೆಟರ್ಡ್ ಎನ್ನುವ ಪಾಲಿಸಿಯನ್ನು ನಾವು ನಡೆಸಿಕೊಂಡು ಬರುತ್ತೇವೆ.

ಶ್ರೀ ಹೆಚ್.ಡಿ. ಚೌಡಯ್ಯ.—ಮಾನ್ಯ ಮಂತ್ರಿಗಳು ಹೇಳತಕ್ಕದ್ದು ರಿಲೆವೆಂಟ್ ಅಲ್ಲ. ಅವರು ಏನೇನೋ ಹೇಳುತ್ತಿದ್ದಾರೆ. ಇದಕ್ಕೆ ಒಂದು ಸ್ವಲ್ಪವೂ ಸಂಬಂಧ ಇಲ್ಲ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ಮಾತನಾಡುವಾಗ ಸರ್ಕಾರದಿಂದ ಕೊಡತಕ್ಕ ಹಣವನ್ನು ಸುಲಲಿತವಾಗಿ ಎಲ್ಲರಿಗೂ ಕೊಡಬೇಕಲ್ಲದೇ ಅದರಲ್ಲಿ ಬೇಧ ಮಾಡಬಾರದು ಎಂದು ಹೇಳಿದ್ದಾರೆ ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರಾದ ಶಾಮಣ್ಣನವರು ಅದೇ ರೀತಿ ಅಭಿಪ್ರಾಯ ಕೊಟ್ಟಿದ್ದಾರೆ ಅದಕ್ಕೆ ಉತ್ತರ ಕೊಟ್ಟಿದ್ದೇನೆ.

SRI G.B. SHANKAR RAO.—I rise on a point of order. The Hon'ble Minister has to speak on the amending Bill. This does not come under the amending Bill. He is going astray. Why should he introduce all his prophecies, I don't understand. The Hon'ble Minister should confine himself only to the Amending Bill. How long we have to sit here if he goes on giving a long sermon?

ಶ್ರೀ ಕೆ. ಪ್ರಭಾಕರ್.—ಯಾವ ಯಾವ ಸದಸ್ಯರು ಏನು ಹೇಳಿದ್ದಾರೋ ಅದಕ್ಕೆ ಉತ್ತರ ಬರುವ ರೀತಿಯಲ್ಲಿ ನಾಲ್ಕು ಮಾತುಗಳನ್ನು ಹೇಳಿದ್ದೇನೆ. ಮಾನ್ಯ ಶಿವಪ್ಪನವರು ಕೆಲವು ವ್ಯವಹಾರಗಳಲ್ಲಿ ಚುನಾವಣಾಧಿಕಾರಿಗಳ ನಡುವೆ ವ್ಯವಹಾರ ಮಾಡುವಾಗ ಗೊಂದಲ ಉಂಟಾಗುವ ಪರಿಸ್ಥಿತಿ ಬರುತ್ತೆ, ವಿಚಾರಗಳನ್ನು ಖಚಿತವಾಗಿ ತಿಳಿದುಕೊಂಡಿದ್ದು ಗೊಂದಲಗಳಿಗೆ ಅವಕಾಶ ಇಲ್ಲದಂತೆ ವ್ಯವಸ್ಥೆ ಮಾಡಬೇಕು ಎಂದು ಹೇಳಿದ್ದಾರೆ. ಅದು ಒಪ್ಪತಕ್ಕ ಮಾತು.

ಇನ್ನು ಇದು ರಾಜಕೀಯ ದೃಷ್ಟಿಯಿಂದ ತಂದಂತಹ ಬಿಲ್ಲು ಅಲ್ಲ; ಸಮಯೋಚಿತವಾಗಿಯೇ ತಂದಿದ್ದೇವೆ ಎಂದು ತಿಳಿಸುತ್ತೇನೆ. ಮತ್ತು ಮಂತ್ರಿಗಳ ಇಚ್ಛೆಗೆ ಬಂದಂತೆ ತಂದ ಬಿಲ್ ಕೂಡ ಅಲ್ಲ; ಇದು ರಾಜಕೀಯದಲ್ಲಿ ನಡೆಯಕೂಡದು.

ಶ್ರೀ ಕೆ. ಭಾಸ್ಕರ ನಾಯ್ಡು.—ಅಧ್ಯಕ್ಷರೇ ೬ ಗಂಟೆ ಆಯಿತು.

ಶ್ರೀ ಹೆಚ್.ಡಿ. ದೇವೇಗೌಡ.—ನಾಳೆ ಮುಗಿಸೋಣ.

SRI C.M. ARMUGHAM.—Sir, may I have my submission. It is already 6'o clock. I would like to know from the Chair, whether you are going to extend the time. During the last week we have sat upto 8-00 p.m. or so. Now, we do not have any demands to be passed. Let the Minister commence his reply tomorrow. We can take up this subject tomorrow and complete it.

6-00 P.M.

ಶ್ರೀ ಹೆಚ್.ಡಿ. ಚೌಡಯ್ಯ.--ಮಂತ್ರಿಗಳು ಇನೂ ಪೀಠಿಕೆ ಯಲ್ಲಿಯೇ ಇದ್ದಾರೆ.

ಶ್ರೀ ಕೆ. ಪ್ರಭಾಕರ್.—ಇನ್ನು ಲಕ್ಷ್ಮೀಸಾಗರ್‌ರವರು ಮಾತನಾಡುತ್ತಾ ಸರ್ಕಾರಕ್ಕೆ ಕೊಡತಕ್ಕಂಥ ಅಧಿಕಾರ ಜಾಸ್ತಿಯಾಯಿತು. ಇದು ಸರಿಯಾಗಿ ಉಪಯೋಗವಾಗುವುದರಲ್ಲಿ ಬಹಳ ಎಚ್ಚರಿಕೆ ವಹಿಸ ಬೇಕು ಇಲ್ಲದೇ ಇದ್ದರೆ ತೊಂದರೆಯಾಗಬಹುದೆಂಬ ಶಂಕೆ ವ್ಯಕ್ತಪಡಿಸಿದ್ದಾರೆ. ಶಾಮಣ್ಣನವರು ಕೂಡ ಅದೇ ಮಾತನ್ನು ಹೇಳಿದ್ದಾರೆ. ಈ ಅಧಿಕಾರವನ್ನು ತೆಗೆದುಕೊಂಡಿದ್ದೇವೆ. ಇದು ದುರ್ವಿನಿಯೋಗ ವಾಗುವುದಿಲ್ಲ. ಮತ್ತು ಅತಿರೇಕಗಳಿಗೆ ಹೋಗತಕ್ಕ ಸಂದರ್ಭ ಬರುವುದಿಲ್ಲ; ನ್ಯಾಯದ ದೃಷ್ಟಿಯಿಂದ ವಿವೇಚನೆಯ ದೃಷ್ಟಿಯಿಂದ ಪ್ರಜಾಪಾಲನೆಯಲ್ಲಿ ಪ್ರಜೆಗಳ ಹಿತಾಸಕ್ತಿಗೆ ಅನುಗುಣವಾಗಿ ಹೇಗೆ ಮಾಡ ಬೇಕೋ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಅಧಿಕಾರವನ್ನು ಉಪಯೋಗಿಸುತ್ತೇವೆ. ಇಷ್ಟು ಹೇಳಿ ಈ ಒಂದು ಕಾನೂನನ್ನು ತಾವು ಒಪ್ಪಿ ಬೆಂಬಲ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ತಿದ್ದುಪಡಿಯಲ್ಲಿರತಕ್ಕ ಕಾನೂನಿನ ಬಗೆ ಅದರಿಂದಾಗುವ ತೊಂದರೆಯ ಬಗ್ಗೆ ವಿಷಯವನ್ನು ಓದಿ ಸಚಿವರ ಗಮನಕ್ಕೆ ತಂದಿದ್ದೇವೆ, ಈ ಸದನದ ಗಮನಕ್ಕೆ ತಂದಿದ್ದೇವೆ; ಇವರನ್ನು ನಂಬಿ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈ ಪರ್ಟಿಕ್ಯುಲರ್ ಕ್ಲಾಸನ್ನು ಬಿಟ್ಟು ಬಿಡಿ. ಇದು ಅಪಾಯಕರವಾದ ಕ್ಲಾಸ್.

ಶ್ರೀ ಕೆ. ಪ್ರಭಾಕರ್.—ಅಪಾಯವಾದದ್ದೇನು ಇಲ್ಲ; ಸರಿಯಾಗಿಯೇ ಇದೆ.

ಶ್ರೀ ಹೆಚ್.ಡಿ. ದೇವೇಗೌಡ.—ಮುಂದೆ ಪಂಚಾಯ್ತಿ ಸದಸ್ಯರ ಚುನಾವಣೆ ಆಗಬೇಕಾಗುತ್ತದೆ. ತಿದ್ದುಪಡಿ ಮಾಡುವುದರ ಮುಖೇನ ಸರ್ಕಾರ ಅಧಿಕಾರವನು ಪಡೆಯುತ್ತಿದೆ: ಅದನ್ನು ಮತ್ತೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ನೀವು ಚುನಾವಣೆ ಮುಂದೂಡಿ ಡಿಕ್ಲರೇಷನ್ ಮಾಡಿದ ಮೇಲೆ ಆಯಿತು: ನೀವು ಕೊಡುವ ಆಶ್ವಾಸನೆ ಒಪ್ಪುವುದಕ್ಕೆ ಸಾಧ್ಯವಿಲ್ಲ; ನೀವು ಏನು ಶಾಶ್ವತವಾಗಿ ಇರುತ್ತೀರೇನು? ಕೋರ್ಟಿನ ಒಳಗಡೆ ವಾದ ಮಾಡಿ ಈಚೆಗೆ ಬಂದು ಟೋಪಿ ಹಾಕುತ್ತೇವೆ. ಆತುರದಲ್ಲಿ ಪಾಸ್ ಮಾಡುವುದರಿಂದ ಪ್ರಯೋಜನವಿಲ್ಲ. ಈಗ ಪಾಸ್ ಮಾಡದಿದ್ದರೆ ಏನು ಮುಳುಗಿಹೋಗುವುದಿಲ್ಲ; ನಿಮಗೆ ಸ್ಟ್ರೆಂತ್ ಇದೆ ನೀವು ಪಾಸ್ ಮಾಡಿಕೊಂಡು ಹೋಗಿಬಿಡ್ತೀರಿ? ಆದರೆ ಈ ಪರ್ಟಿಕುಲರ್ ಕ್ಲಾಸ್ ಬಿಟ್ಟುಬಿಡಿ.

SRI B. BASAVALINGAPPA.—The same provision is made in the Municipal Act giving powere to the Government in holding or postponing the elections. This House has passed that Act, Now, this similar provision has been made in this Act. I do not know why hon'ble Members should entertain certain apprehensions about that provision.

ಶ್ರೀ ಹೆಚ್. ಡಿ. ದೇವೇಗೌಡ.--ಚುನಾವಣೆ ಮುಗಿದುಹೋಗಿ, ಬೆಳಿಗ್ಗೆ ಕೌಟಿಂಗ್ ಇರುವಾಗ ರಾತ್ರಿ ರದ್ದುಮಾಡಬಹುದು.

SRI A, LAKSHMISAGAR.—Sir, Hon'ble Minister for Revenue will read the clause with me. "Every election of members shall be subject to the control and supervision of the Government and it shall be lawful for the Government to issue directions regarding all matters connected with the elections including directions for cancellation and modification of the calendar of events or postponement of the poll"

You please see the Objects and Reasons also. It says "It was considered necessary to provide for cancellation and modification of of the calendar of events or postponement of the poll by issuing directions by the Government on the lines similar to the provisions in the

Karnataka Municipalities Act. You have stated in the Objects and Reasons, that the original Act as it stands does not empower the Deputy Commissioners to postpone or to cancel the calendar of events once issued by him, therefore, there is a lacuna in the Act. Supposing there is Cholera or plague in an area, this same provision is there in the Representation of Peoples Act which is a Central Act, wherein the Election Commission has been empowered to countermand election or postpone the poll so far as a particular area is concerned. That I understand. But, under this clause, the Government can interfere with the election at all stages and even after the elections have been validly held. You can even cancel the elections. Nothing prevents you.

SRI K. BHASKAR NAIDU.—I would like to know which is that section ?

SRI A. LAKSHMISAGAR.—It is Section 7. It reads as follows .

> "(3) Every election of members shall be subject to the control and supervision of the Government and it shall be lawful for the Government to issue directions regarding all matters connected with the elections including directions for cancellation and modification of the calendar of events or postponement of the poll"

In the Statement of objects and reasons it is said to provide for a provision in the Act which is not there-namely, to authorise Deputy Commissioners to postpone or cancel the calendar of events issued by him. This is the point to be explained.

Now, as proposed in this clause it gives more powers to the Government.

SRI GOVIND P. VADEYARAJ.—Sir, I rise on a point of order. The hon'ble Member Sri Lakshminagar has raised some pertinent points, and instead of the Minister replying to them, other hon'ble Members are replying to them, on his behalf.

MR. SPEAKER.—Sri Lakshmisargar is offering his opinion with my permission and other hon'ble Members also are giving their opinions with my permission.

SRI GOVIGD P. VADEYARAJ.—This shows that there are more Ministers than Sri Prabhakar.

† SRI B. BASAVALINGAPPA (Minister for Revenue).—Sir, we have issued an ordinance and it has to be replaced. Even if the hon'ble Member entertains a doubt it has got to be a future doubt because Government has already taken action under this ordinance. It does not give absolute powers to cancel, postpone or declare null and void

whatever has happened ; it is only to meet certain contingencies like rain. Suppose there is heavy rainfall and suppose we have issued the calender of events and we find that the election cannot be held, should we not postpone it ?

SRI A. LAKSHMISAGAR.—I have no quarrel with the proposition of my hon'ble Friend Sri Basavalingappa that this amendment Bill seeks to replace the ordinance that was issued But this goes beyond the intention of the Government. Government's intention is to empower the Deputy Commissioner to postpone or cancel the calendar of events. If the scope of this clause is confined to this only I have no objection ; but it goes beyond that. How the courts would interpret the meaning of this clause is not known to us, but *prima facie* it confers on the Government untrampelled powers. Suppose the elections have gone against his party, the Government can interfere and ask the Deputy Commissioner to cancel them Then, what is the remedy open to us. They want to set at naught the entire democratic process. It is stated in the Statement of Objects and Reasons :

> "It was considered necessary to provide for cancellation and modification of the calendar of events or postponement of the poll by issuing directions by the Government on the lines similar to the provisions in the Karnataka Municipalities Act, 1964,"

SRI B. BASAVALINGAPPA.—Note the words on the lines similar to the provisions in the Karnataka Municipalities Act'

SRI A. LAKSHMISAGAR.—That may be there.

SRI B. BASAVALINGAPPA.—What is the effect now ?

SRI A. LAKSHMISAGAR.—Please see the explanation and what is to be interpreted by the court and what is stated in the statement of objects and reasons. It only indicates your intention ; but what is sought to be done by this clause is different. The proposed clause goes against the basic principle upon which the statement of objects and reasons are stated. According to us it goes beyond what is stated in the statement of objects and reasons.

SRI S.M. SHERNALY CHANDRASEKHAR.—Why not you read it as one sentence? Why not stress on the calendar of events ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಬಸವಲಿಂಗಪ್ಪನವರ ವ್ಯಾಖ್ಯಾನವನ್ನು ನಾನು ಕೇಳಿ ಕೊಂಡೆ. ಅವರು ಈ ಆರ್ಡಿನೆನ್ಸ್ ಅನ್ನು ರೀಪ್ಲೇಸ್ ಮಾಡಬೇಕಾಗಿದೆ. ಈಗಾಗಲೇ ಚುನಾವಣೆಯನ್ನು ಮುಂದೂಡಿ ಅದರ ಕಾರ್ಯ ಮುಗಿದಿರುವುದರಿಂದ ಈ ಆರ್ಡಿನೆನ್ಸ್ ಅನು ಅಂಗೀಕಾರ ಮಾಡಬೇಕು ಎಂದು ಹೇಳುತ್ತಾರೆ. ಸ್ವಾಮಿ, ಇದಕ್ಕೆ ನಾನು ಒಂದು ಸಲಹೆ ಕೊಡುತ್ತೇನೆ. ಅದೇನೆಂದರೆ It shall be lawful for the government to issue directions regarding all matters. ಈ ಒಂದು ತಿದ್ದುಪಡಿ ಮಸೂದೆ ನಾಳೆ ಪಾಸ್ ಆದರೆ ಏನಾಗುತ್ತದೆ ಸ್ವಾಮಿ ?

ಶ್ರೀ ಡಿ. ಜಯದೇವರಾಜ ಅರಸ್.—ಸ್ವಾಮಿ, ಇದರಲ್ಲಿ ಅನುಮಾನಕ್ಕೆ ಅವಕಾಶವೇ ಇಲ್ಲ. ಈ ಒಂದು ಪ್ರಾವಿಷನ್ ಮುನಿಸಿಪಾಲಿಟಿ ಆಕ್ಟ್‌ನಲ್ಲಿ ಮೊದಲೇ ಇದೆ. ಅದನ್ನು ಇಲ್ಲಿ ಪೂರ್ಣವಾಗಿ ಹಾಕಿದ್ದೇವೆ ಅಷ್ಟೆ. ಹಿಂದೆ ಇದರ ಬಗ್ಗೆ ಯಾರೂ ಮಾತನಾಡಲಿಲ್ಲ. ಆದುದರಿಂದ ಇದರಲ್ಲಿ ಅನುಮಾನ ಬರತಕ್ಕಂಥಾ ಸಂದರ್ಭವೇ ಇಲ್ಲ ಎಂದು ಹೇಳುತ್ತೇನೆ. ಅಂಥಾದ್ದರಲ್ಲಿ ಈವೊತ್ತು ಏತಕ್ಕೆ ಅನುಮಾನ ಬರುತ್ತದೆ ಹೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಹೆಚ್. ಡಿ. ದೇವೇಗೌಡರು ಈ ಬಗ್ಗೆ ಏನು ಒಂದು ಅನುಮಾನವನ್ನು ವ್ಯಕ್ತಪಡಿಸಿದ್ದಾರೆ ಅದಕ್ಕೆ ಆಧಾರ ಇಲ್ಲ. ಇದು ೧೯೬೪ನೇ ಇಸವಿಯ ಮುನಿಸಿಪಾಲಿಟಿ ಆಕ್ಟ್‌ನಲ್ಲಿ ಇದೆ. ಅದನ್ನು ನಾವು ಕಾಪಿ ಮಾಡಿಕೊಂಡಿದ್ದೇವೆ. ಇದರಲ್ಲಿ ಕೋರ್ಟ್‌ಗೆ ಹೋಗುವುದಕ್ಕೂ ಕೂಡ ಇಂಟರ್‌ಪ್ರೆಟ್ ಮಾಡಿದ್ದೇವೆ. ನಾವು ಇದರಲ್ಲಿ ಈ ಒಂದು ಪ್ರಾವಿಷನ್ ಮಾಡಿದ್ದೇವೆ. ಆದರಿಂದ ಇದರಲ್ಲಿ ಅನ್ಯಾಯವಾಗಿದೆ ಎನ್ನುವ ಭಯ ನಿಮಗೆ ಏತಕ್ಕೆ ಬೇಕು ಎಂದು ನಾನು ಕೇಳುತ್ತೇನೆ. ನನಗಂತೂ ನೀವು ಕೇಳುತ್ತಾ ಇರುವುದು ಅರ್ಥವಾಗುತ್ತಾ ಇಲ್ಲ. ಇನ್ನು ಲಕ್ಷ್ಮಿಸಾಗರ್ ಅವರಿಗೆ ಇದರಲ್ಲಿ ಅನುಮಾನ ಇರಲೇ ಬೇಕು ಏತಕ್ಕೆಂದರೆ ಅವರಿಗೆ ಮದುವೆ ಆಗಿಲ್ಲಾ, ಮದುವೆ ಆಗಿದ್ದರೆ ಈ ಅನುಮಾನ ಹೋಗುತ್ತಿತ್ತು. ಇದು ಸರಿಯಾಗಿದೆ. ಸರ್ಕಾರದವರು ಇದನ್ನು ದುರುದ್ದೇಶವಾಗಿ ತಂದಿಲ್ಲಾ, ಮತ್ತು ದುರುಪಯೋಗ ಮಾಡೂ ಇಲ್ಲ, ಹಿಂದೂ ಮಾಡಿಲ್ಲಾ, ಮುಂದು ಮಾಡುವುದಿಲ್ಲ ಎಂದು ಹೇಳಿ ದಯವಿಟ್ಟು ಈ ಸಭೆ ಇದಕ್ಕೆ ಒಪ್ಪಿಗೆ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ತಮ್ಮಲ್ಲಿ ನನ್ನ ಒಂದು ಸವಿನಯ ಪ್ರಾರ್ಥನೆ. ಅದು ಏನೆಂದರೆ ಈಗಾಗಲೇ ವೇಳೆ ೫-೩೦ ಆಗಿದೆ. ಮಾನ್ಯ ಮಂತ್ರಿವರ್ಯರನ್ನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಸ್ವಲ್ಪ ಅವಕಾಶ ಕೊಡಿ. ನಾಳೆ ದಿವಸ ತಾವು ಇದನ್ನು ಓದಿಕೊಂಡು ಚೆನ್ನಾಗಿ ಅರ್ಥಮಾಡಿಕೊಂಡು ಬನ್ನಿ. ತಾವು ಹೇಳಿದ ಉದ್ದೇಶ ಇದರಲ್ಲಿ ಸರಿಯಾಗಿ ಇದ್ದರೆ ನಾವು ಇದಕ್ಕೆ ಸಂಪೂರ್ಣ ಬೆಂಬಲ ಕೊಡುತ್ತೇವೆ ಎಂದು ನಾವು ಈಗಾಗಲೇ ಹೇಳಿದ್ದೇವೆ. ಇಲ್ಲದೇ ಹೋದರೆ ಎಷ್ಟು ಸಲ ಹೇಳಿದರೂ ಕೂಡ ಪ್ರಯೋಜನವಾಗುವುದಿಲ್ಲ. ನಮ್ಮ ಕಡೆಯವರು ಇದರಲ್ಲಿ ರಾಜಕೀಯ ದುರುದ್ದೇಶ ಇದೆ ಎನ್ನುವ ಭಾವನೆಯಲ್ಲಿ ಅವರು ಹೇಳಿದರು, ಅದಕ್ಕೆ ನಾನು ಹೇಳುತ್ತೇನೆ, ನಮ್ಮ ಕಡೆಯವರೂ ಯಾರೂ ಕೂಡ ಆ ರೀತಿ ಹೇಳಲಿಲ್ಲಾ. ಆದುದರಿಂದ ಈ ಸಭೆಯನ್ನು ಇಲ್ಲಿಗೇ ದರಖಾಸ್ತು ಮಾಡೋಣ. ಇಲ್ಲದೇ ಹೋದರೆ ನಾವೆಲ್ಲಾ ಹೋಗುತ್ತೇವೆ ನೀವು ಪಾಸು ಮಾಡಿಕೊಳ್ಳಿ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಕಂದಾಯ ಸಚಿವರು ಮತ್ತು ಶ್ರೀ ಡಿ. ಜಯದೇವರಾಜ ಅರಸ್‌ರವರು ಹೇಳಿದಂತೆ ಮುನಿಸಿಪಾಲಿಟಿ ಆಕ್ಟ್ ೧೯೬೪ ಸೆಪ್ಟೆಂಬರ್‌ರಲ್ಲಿ ಏನು ಒಂದು ಪದ ಹಾಕಿದ್ದಾರೆಯೋ ಅದೇ ಪದವನ್ನು ಇದರಲ್ಲೂ ಹಾಕಿದ್ದಾರೆ ಅಷ್ಟೆ. ಇನ್ನಾವ ಬದಲಾವಣೆಯನ್ನೂ ಸಹ ಮಾಡಿಲ್ಲಾ. ಇದನ್ನು ತಪ್ಪಿಸುವುದಕ್ಕೆ ಬೇಕು ಬೇಕೆಂತಲೇ ನಮ್ಮ ಮಿತ್ರರು ಅಬ್ಜೆಕ್ಷನ್ ತೆಗೆಯುತ್ತಾ ಇದ್ದಾರೆ. ಆದುದರಿಂದ ತಾವು ದಯವಿಟ್ಟು ಇದನ್ನು ಓಟಿಗೆ ಹಾಕಬೇಕು ಎಂದು ಕೇಳುತ್ತೇನೆ. ಇದರಿಂದ ಏನೂ ಅನ್ಯಾಯವಾಗುವುದಿಲ್ಲ ಎಂದು ನಾವು ಆಶ್ವಾಸನೆ ಕೊಡುತ್ತೇವೆ. ಅವರು ಈ ಬಗ್ಗೆ ಹಿಂದೆ ಒಂದು ಬಿಲ್ಲನ್ನು ಪಾಸು ಮಾಡಿದ್ದಾರೆ. ಆದುದರಿಂದ ಇದರಲ್ಲಿ ಏನೂ ಅನ್ಯಾಯವಿಲ್ಲ. ದಯಮಾಡಿ ಇದಕ್ಕೆ ತಮ್ಮ ಅನುಮತಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಸ್ವಾಮಿ, ಮಂತ್ರಿಗಳೇ ಸುಮ್ಮನೆ ಕುಳಿತಿದ್ದಾರೆ. ಹಾಗಿರುವಾಗ ನಿಮಗೆ ಯಾರು ಆಶ್ವಾಸನೆ ಕೊಟ್ಟಿದ್ದಾರೆ ಹೇಳಿ.

6-00 P.M.

† SRI V. M. KUSHNOOR (Minister of State for Co-operation).—Sir, the apprehension in the minds of the Opposition is that by allowing

this amendment the Government is taking all the powers. There is a provision in the Karnataka Village Panchayats and Local Boards Act, that even after the elections they can cancel the elected Panchayat. I would like to draw your kind attention to Section 13 of the Act which reads as follows :—

> "13. DETERMINATION OF VALIDITY OF ELECTIONS
>
> (1) At any time within fifteen days after the declaration of the result of an election any candidate who stood for election, or any person qualified to vote at that election, may apply, together with a deposit of fifty rupees as security for costs, to the Munsiff within whose territorial jurisdiction the village concerned is situate for the determination of the validity of the election."

This provision is there, and therefore there should not be any apprehension in the minds of the Opposition that the Government is taking away all the powers. Even after the elections they can interfere in the matter. If Section 13 (1) is removed, then certainly their apprehension would have been correct. Section 13 is there to say whether the election is valid or not.

SRI H. D. DEVE GOWDA.—But, before the declaration of the results the Government can postpone. As per the argument of the Hon'ble Minister and the interpretation of Section 13, the provision is operative only after the declaration of the elections. The Government, if they want, can postpone the election after the polling. We know how the Municipal Act has been implemented. I can give several instances, where before one hour or two hours the elections have been postponed on flimsy grounds.

SRI H GANGADHARAN.—Till the declaration is made it is considered to be election. Under this amendment, the Government can take the privilege of postponing the election.

SRI BHEEMANNA KANDRE.—I want to know whether the Government is going to withdraw this amendment or not ? This is a black Act; it is undemocratic and it is against the fundamental rights. As a protest I walk-out.

(The hon. member goes upto the seat of hon. Member Sri M. C. Basappa and returns back to his seat)

ಶ್ರೀ ಬಿ. ಭಾಸ್ಕರ ಶೆಟ್ಟಿ.—೧೯೭೬ರಲ್ಲಿ ಮುನಿಸಿಪಾಲಿಟಿ ಆ್ಯಕ್ಟ್‌ನ್ನು ಇದೇ ಸಭೆ ಅಂಗೀಕರಿಸಿದೆ. ಅದರಲ್ಲೂ ಸಹ ಇದೇ ಪದಗಳನ್ನು ಬಳಸಲಾಗಿದೆ. ಆದುದರಿಂದ, ಮಾನ್ಯ ವಿರೋಧ ಪಕ್ಷದ ಸದಸ್ಯರು ಸಹಕರಿಸಿ, ಮಸೂದೆಯನ್ನು ಪಾಸು ಮಾಡಿಕೊಡಬೇಕೆಂದು ಪ್ರಾರ್ಥನೆ. ಈ ಮಸೂದೆಯನ್ನು ಪಾಸ್ ಮಾಡುವುದರಿಂದ ಯಾರಿಗೆ ಯಾವ ಅನಾನುಕೂಲವೂ ಆಗುವುದಿಲ್ಲ.

ಶ್ರೀ ಎಂ.ಸಿ. ಬಸಪ್ಪ.—ಮಾನ್ಯ ಸದಸ್ಯರು ೧೯೭೬ರಲ್ಲಿ ಪಾಸ್ ಮಾಡಿದ ಮುನಿಸಿಪಲ್ ಆ್ಯಕ್ಟ್‌ನ್ನು ಉಲ್ಲೇಖಿಸಿದ್ದಾರೆ. ಅದರಲ್ಲೂ ಲ್ಯಾಕ್ಯುನಾ ಇದೆ, ಅದನ್ನೂ ಡಿಲೀಟ್ ಮಾಡಬೇಕಾಗಿದೆ. ಆದುದರಿಂದ, ಅದೇ ಪದಗಳನ್ನು ಬಳಸಿದ ಈ ಮಸೂದೆಯನ್ನು ಪಾಸ್ ಮಾಡುವುದಕ್ಕೆ ನಾವು ಬಿಡುವುದಿಲ್ಲ.

SRI B. BASAVALINGAPPA.—Sir, it is now 6–30 P.M.; I thought it would be over by 6–00. Arguments and counter-arguments are going on. Therefore I think it is better we take it up tomorrow.

MR. SPEAKER.—The House stands adjourned to meet at 1–00 P.M. tomorrow.

The House adjourned at Thirty-five Minutes past Six of the Clock to meet again at One of the Clock on Tuesday, the 1st August 1978.